ಇ)	ಹಾಗಿದ್ದಲ್ಲಿ, ರೈತರಿಗೆ ಸಾಗುವಳಿ ಚೀಟಿ ವಿತರಿಸಲು ಯಾವ ಕಾಯ್ದೆಯಡಿಯಲ್ಲಿ ಅವಕಾಶವಿರುತ್ತದೆ; ರೈತರು ಸಾಗುವಳಿ ಚೀಟಿ (ಹಕ್ಕು ಪತ್ರ ಪಡೆಯಲು) ಪಡೆಯಲು ಯಾವ ಮಾರ್ಗ ಅನುಸರಿಸಬೇಕು; (ವಿವರ ನೀಡುವುದು)	ಕುಲವಳ್ಳಿ ಗ್ರಾಮಗಳ ಜಮೀನುಗಳು ಬಾಂಬೆ ಸರ್ಕಾರದ ಅಧಿಸೂಚನೆ (ನಂ.ಪಿ.ಆರ್.ಎಫ್.2455/6252-ಜೆ)ರ ಪ್ರಕಾರ ಭಾರತೀಯ ಅರಣ್ಯ ಕಾಯ್ದೆ, 1927ರ ಕಲಂ.35ರಡಿ ಖಾಸಗಿ ಅರಣ್ಯ ಅಂತಾ ಅಧಿಸೂಚನೆಗೆ ಒಳಪಟ್ಟ ಜಮೀನಾಗಿರುತ್ತದೆ. ಸದರಿ ಅಧಿಸೂಚನೆಯಲ್ಲಿ ಒಟ್ಟು 267 ಸರ್ವೆ ನಂಬರ್‌ಗಳ ಕ್ಷೇತ್ರ 7965ಎ-00ಗುಂ. ದಾಖಲಿದ್ದು ಸದರಿ ಜಮೀನುಗಳ ಮಾಲ್ಕಿ ಹಕ್ಕನ್ನು ಕೋರಿ ಅರಣ್ಯ ಇಲಾಖೆಯವರು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ **SLP (Petition for Special leave to Appeal) (civil) No. 24260-24261 of 2019** ರಡಿ ಮೇಲ್ಮನವಿ ಸಲ್ಲಿಸಿದ್ದು ಮಾನ್ಯ ನ್ಯಾಯಾಲಯವು ಸದರಿ ಅಧಿಸೂಚನೆಯಲ್ಲಿ ನಮೂದಿಸಿದ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯಾಚರಣೆ ಮಾಡುವಂತಿಲ್ಲ ಎಂದು ತಡೆಯಾಜ್ಞೆ ನೀಡಿರುತ್ತದೆ. ಸರ್ವೋಚ್ಛ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಹಂತದಲ್ಲಿರುವುದರಿಂದ ಈ ಹಂತದಲ್ಲಿ ಯಾವುದೇ ರೈತರಿಗೆ ಜಮೀನು ಮಂಜೂರು ಮಾಡಲು ಹಾಗೂ ಸಾಗುವಳಿ ಚೀಟಿ ವಿತರಿಸಲು ಅವಕಾಶ ಇರುವುದಿಲ್ಲ.

ಈ)	ಯಾವ ಕಾಲಮಿತಿಯಲ್ಲಿ ರೈತರಿಗೆ ಸಾಗುವಳಿ ಚೀಟಿ (ಹಕ್ಕುಪತ್ರ) ವಿತರಿಸಲಾಗುವುದು?	ರಾಜ್ಯದ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಚಿಸಲಾಗಿರುವ ಬಗರ್‌ಹುಕುಂ ಸಮಿತಿಗಳು ಪ್ರತಿ ಶನಿವಾರದಂದು ಅಥವಾ ಅಂದು ರಜೆ ಇದ್ದಲ್ಲಿ ಮುಂದಿನ ಕೆಲಸದ ದಿನದಂದು ನಿಗಧಿತವಾಗಿ ಸಭೆ ನಡೆಸಿ ಬಾಕಿ ಅರ್ಜಿಗಳನ್ನು ಶೀಘ್ರವಾಗಿ ಇತ್ಯಥಪಡಿಸಿ, ಅರ್ಹ ಫಲಾನುಭವಿಗಳಿಗೆ ಸಾಗುವಳಿ ಚೀಟಿ ವಿತರಿಸಲು ಕ್ರಮವಹಿಸುವಂತೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಎಲ್ಲಾ ತಹಶೀಲ್ದಾರ್‌ಗಳಿಗೆ ಸೂಚನೆ ನೀಡಲಾಗಿರುತ್ತದೆ. ಹೀಗೆ ಕ್ರಮವಹಿಸಲಾದ ಪ್ರಗತಿಯ ವರದಿಯನ್ನು ರಾಜ್ಯದ ಆಯಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳು ತಾಲ್ಲೂಕುವಾರು ಕ್ರೋಢೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಸಕಾರದ ಸುತ್ತೋಲೆ ಸಂಖ್ಯೆ: ಕಂಇ 23 ಎಲ್‌ಜಿಪಿ 16, ದಿನಾಂಕ: 22.06.2012ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ. ನಮೂನೆ-50 & ನಮೂನೆ-57ರ ಅರ್ಜಿಗಳು ಇನ್ನೂ ಇತ್ಯರ್ಥಕ್ಕೆ ಬಾಕಿ ಇದ್ದು, ಸದರಿ ಬಾಕಿ ಅರ್ಜಿಗಳನ್ನು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಮುಂದೆ ಮಂಡಿಸಿ ಇತ್ಯರ್ಥಪಡಿಸಲು ಕಾಲಮಿತಿ ನಿಗಧಿಪಡಿಸಿ ದಿನಾಂಕ: 29.12.2018ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಆ ಪ್ರಕಾರ ದಿನಾಂಕ: 26.04.2020ರೊಳಗಾಗಿ ಬಾಕಿ ಅರ್ಜಿಗಳನ್ನು ಇತ್ಯರ್ಥಪಡಿಸಲು ಸೂಚಿಸಲಾಗಿರುತ್ತದೆ.

ಸಂಖ್ಯೆ: ಆರ್‌ಡಿ 29 ಎಲ್‌ಜಿಎಲ್ 2020

(ಆರ್. ಅಶೋಕ)
ಕಂದಾಯ ಸಚಿವರು

98

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ ಇ-87 ಮೀಇಯೋ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 21-03-2020

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು-1.

ಮಾನ್ಯರೆ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. (ಮಾಲೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1279 ಕ್ಕೆ ಉತ್ತರ ಒದಗಿಸುವ ಬಗ್ಗೆ.

******

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ನಂಜೇಗೌಡ ಕೆ.ವೈ. (ಮಾಲೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1279 ಕ್ಕೆ ಸಂಬಂಧಿಸಿದ ಕನ್ನಡ ಭಾಷೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

Kamakshi U.A. 21/3/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1279
2) ಸದಸ್ಯರ ಹೆಸರು : ಶ್ರೀ ನಂಜೇಗೌಡ ಕೆ.ವೈ. (ಮಾಲೂರು)
3) ಉತ್ತರಿಸುವ ದಿನಾಂಕ : 23-03-2020
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಮೀನುಗಾರಿಕೆ ಇಲಾಖೆ ಯಡಿಯಲ್ಲಿ ಬರುವ ಯೋಜನೆಗಳಾವುವು;	ಇಲಾಖೆಯಡಿಯಲ್ಲಿ ಬರುವ ಯೋಜನೆಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಆ)	ಕಳೆದ ಎರಡು ವರ್ಷದಲ್ಲಿ ಕೋಲಾರ ಜಿಲ್ಲೆಯಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ತಾಲ್ಲೂಕುವಾರು ಮತ್ತು ಅನುದಾನವಾರು, ಯೋಜನೆವಾರು, ಅನುದಾನದ ಪೂರ್ಣ ವಿವರ ಒದಗಿಸುವುದು)	ಕಳೆದ ಎರಡು ವರ್ಷದಲ್ಲಿ ಕೋಲಾರ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಿಗೆ ತಾಲ್ಲೂಕುವಾರು, ಮತ್ತು ಅನುದಾನವಾರು, ಯೋಜನೆವಾರು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಇ)	ತಾಲ್ಲೂಕು ಸಹಾಯಕ ನಿರ್ದೇಶಕರು ಅನುಷ್ಠಾನಗೊಳಿಸಿರುವ ಮೀನುಗಾರಿಕೆ ಯೋಜನೆಗಳು ಯಾವುವು? (ವಿವರ ಒದಗಿಸುವುದು)	ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳು ಪ್ರಮುಖವಾಗಿ ಕೆರೆಗಳ ವಿಲೇವಾರಿ, ಜಲಾಶಯಗಳ ಅಭಿವೃದ್ಧಿ ಮತ್ತು ವಿಸ್ತರಣಾ ಕಾರ್ಯಕ್ರಮಗಳೊಂದಿಗೆ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ಮೀನುಮರಿ ಖರೀದಿಗೆ ಸಹಾಯ, ಕೆರೆಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಮತ್ಸ್ಯಕೃಷಿ ಆಶಾಕಿರಣ, ಒಳನಾಡು ಮೀನು ಕೃಷಿ ಯೋಜನೆಯಡಿ ಸಹಕಾರ ಸಂಘಗಳಿಗೆ ಮೀನುಮರಿ ಖರೀದಿಗೆ ಸಹಾಯ, ನೀಲಿಕ್ರಾಂತಿ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಕೋಲಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗಿರುವ ಕಾರ್ಯಕ್ರಮಗಳ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಪಸಂಮೀ ಇ-87 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ [illegible] ರವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1279 ಕ್ಕೆ

ಅನುಬಂಧ-1

2019-20 ನೇ ಸಾಲಿನ ಮೀನುಗಾರಿಕೆ ಇಲಾಖೆಯ ಯೋಜನೆಗಳ ವಿವರ

1. **ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ**

a. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು.

b. ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ ಮರಿಗಳನ್ನು ಬಿತ್ತನೆ ಮಾಡಲಾಗುವುದು.

c. ಸರ್ಕಾರ ಸ್ವಾಮ್ಯದ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಖರೀದಿಸಿದ ಎಲ್ಲಾ ತಳಿಗಳ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಮೀನು ಕೃಷಿಕರಿಗೆ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

d. ಸಮಗ್ರ ಮೀನು ಕೃಷಿಗೆ ಕ್ಲಸ್ಟರ್ ಮಾದರಿಯಲ್ಲಿ ಆಯ್ದ 14 ಜಂಟಿ ತಾಲ್ಲೂಕುಗಳಲ್ಲಿ ಸಮಗ್ರವಾಗಿ ಮತ್ತು ಸುಸಂಘಟಿತ ಮಾದರಿಯಲ್ಲಿ ಮೀನು ಕೃಷಿಯ ಅಭಿವೃದ್ಧಿಯನ್ನು ಕೈಗೊಳ್ಳಲಾಗುವುದು. ಈ ಯೋಜನೆಯಡಿ ಕೃಷಿಕರಿಗೆ ಮೀನು ಸಾಕಾಣಿಕೆಗೆ ಕೊಳ ಮತ್ತು ಇತರೆ ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಸಹಾಯಧನ ನೀಡಲಾಗುವುದು. ಕ್ಲಸ್ಟರ್ ಪ್ರದೇಶದಲ್ಲಿ ಕೃಷಿಗೆ ಅನುಪಯುಕ್ತವಾಗಿರುವ ಜೌಗು-ಚೌಳು ಪ್ರದೇಶಗಳಲ್ಲಿ ಮೀನು ಸಾಕಾಣಿಕೆಗೆ ಆದ್ಯತೆ ನೀಡಲಾಗುವುದು.

2. **ಹೊಸ ಘಟಕ:**ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು.

3. **ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ** ರಾಜ್ಯದ ಆಯ್ದ ಜಲಾಶಯಗಳಲ್ಲಿ ಬೆರಳುದ್ದದ ಮೀನು ಮರಿ (Advanced fingerlings) ಬಿತ್ತನೆ ಮಾಡುವ ಮೂಲಕ ಮೀನುಗಾರಿಕೆ ಅಭಿವೃದ್ಧಿ ಕೈಗೊಳ್ಳುವುದು. ಅಗತ್ಯವಾದ ಬೆರಳುದ್ದದ ಮೀನುಮರಿಗಳನ್ನು ನೊಂದಾಯಿತ ಮೀನುಮರಿ ಸಾಕಾಣಿಕೆದಾರರಿಂದ ಸರ್ಕಾರವು ನಿಗದಿಪಡಿಸಿದ ದರದಲ್ಲಿ ಖರೀದಿಸಲಾಗುವುದು.

4. **ನೀಲಿ ಕ್ರಾಂತಿ - ಮೀನುಗಾರಿಕೆ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (ಕೇಂದ್ರ ಪುರಸ್ಕೃತ ಯೋಜನೆ)** ಕೇಂದ್ರ ಸರ್ಕಾರದ ನೀಲಿಕ್ರಾಂತಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಕಾರ್ಯಾಚರಣೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ

ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಶೇ.24 ರಷ್ಟು ನೆರವಿನೊಂದಿಗೆ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

5. **ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ (2405-00-101-0-67)**

ಉತ್ತರ ಕರ್ನಾಟಕದಲ್ಲಿ ಸುಮಾರು 1.64 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಜಲಾಶಯಗಳು 42,195 ಹೆಕ್ಟೇರ್ ವಿಸ್ತೀರ್ಣದ ದೊಡ್ಡಕೆರೆಗಳು, 20667 ಹೆಕ್ಟೇರ್ ವಿಸ್ತೀರ್ಣದ ಗ್ರಾಮ ಪಂಚಾಯತ್ ಕೆರೆಗಳು, ನದಿಗಳು ಮತ್ತು ಕಾಲುವೆಗಳಿದ್ದು, ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ವಿಫುಲ ಅವಕಾಶವನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ "ನಿಜ ಶರಣ ಶ್ರೀ.ಅಂಬಿಗರ ಚೌಡಯ್ಯ ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಸಂಸ್ಥೆ" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಉದ್ದೇಶಿತ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ,

- ಉತ್ತರ ಕರ್ನಾಟಕದ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು.
- ಅಗತ್ಯ ಯೋಜನಾ ವರದಿ ಸಿದ್ಧಪಡಿಸಿ ವಿವಿಧ ಮೂಲಗಳಿಂದ ಮೀನುಗಾರಿಕೆ ಚಟುವಟಿಕೆಗಳಿಗೆ ಅನುದಾನವನ್ನು ಪಡೆದು ಕಾರ್ಯಕ್ರಮ ಅನುಷ್ಠಾನಗೊಳಿಸುವುದು. ಮತ್ತು
- ಮೀನುಗಾರಿಕೆ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ಧಿಯಲ್ಲಿ ನಿರತರಾಗಿರುವ ಸಂಸ್ಥೆಗಳು ಹಾಗೂ ಮೀನುಗಾರರ ಸಂಘಟನೆಗಳ ಸಹಯೋಗದೊಂದಿಗೆ ಉತ್ತರ ಕರ್ನಾಟಕದ ಮೀನುಗಾರಿಕೆ ಮತ್ತು ಮೀನು ಕೃಷಿ ಅಭಿವೃದ್ಧಿಗೆ ಕ್ರಮವಹಿಸುವುದು.

6. **ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು** ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಆವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.3.00 ಲಕ್ಷ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1.00 ಲಕ್ಷ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1.00 ಲಕ್ಷ ಮೀನುಗಾರಿಕೆ ಬಂದರು/ ಇಳಿದಾಣ ಕೇಂದ್ರದಲ್ಲಿ ಕೆಲಸದಲ್ಲಿದ್ದಾಗ ಮರಣ ಹೊಂದಿದಲ್ಲಿ ರೂ.1.00 ಲಕ್ಷ, ಸಮುದ್ರದಲ್ಲಿ ಮೀನುಗಾರಿಕೆಗೆ ಹೋದಾಗ ಅನಾರೋಗ್ಯದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷ ನೆರವು ನೀಡಲು ಅವಕಾಶವಿದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ 6.00 ಲಕ್ಷ ಪರಿಹಾರ ನೀಡಲಾಗುವುದು.

7. **ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು:**

ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ 300 ಲೀಟರ್ ಸೀಮೆ ಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ.

8. **ಮೀನುಗಾರಿಕೆ ದೋಣಿಗಳಿಗೆ ಡೀಸಲ್ ಮಾರಾಟ ತೆರಿಗೆ ಮರುಪಾವತಿ** ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರಕ್ಕೆ ಸಮನಾದ ಮೊತ್ತವನ್ನು ಸಹಾಯಧನವಾಗಿ ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ನೇರವಾಗಿ ಬಿಡುಗಡೆ ಮಾಡುವ ಮೂಲಕ ಮರುಪಾವತಿ ಮಾಡುವುದು ಈ ಯೋಜನೆಯ ಉದ್ದೇಶ. ವಾರ್ಷಿಕ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 1,50,000 ಕಿಲೋ ಲೀಟರ್ ಡೀಸಲ್ ಮೇಲಿನ ಮಾರಾಟ ಕರಕ್ಕೆ ಸಹಾಯಧನ ನೀಡಲಾಗುವುದು.

9. **ಮೀನು ಮಾರುಕಟ್ಟೆಗಳ ನಿರ್ಮಾಣಕ್ಕಾಗಿ ಸಹಾಯ:** ಮೀನುಗಾರರ ಸಹಕಾರ ಸಂಘಗಳಿಗೆ ತಮ್ಮ ಸ್ವಂತ ನಿವೇಶನದಲ್ಲಿ ನೀರು, ವಿದ್ಯುಚ್ಛಕ್ತಿ ಮತ್ತು ಇತರ ಸೌಲಭ್ಯಗಳೊಂದಿಗೆ ಕನಿಷ್ಠ 500 ಚದರಡಿಯ ಮೀನು ಸಂಗ್ರಹಣೆ ಹಾಗೂ ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಲು ಅಂದಾಜು 10 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ಶೇ.75 ರಷ್ಟು ಸಹಾಯಧನವನ್ನು ಒದಗಿಸುವ ಮೂಲಕ ನೆರವು ನೀಡಲಾಗುವುದು.

10. **ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ** ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಖರೀದಿಸಲು ಅವಕಾಶ ಮಾಡಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

   a. ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್ ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ. ಈ ಯೋಜನೆಯ ಘಟಕ ವೆಚ್ಚ ಗರಿಷ್ಠ ರೂ.10,000 ಗಳಾಗಿದ್ದು, ಶೇ.100 ರಷ್ಟು ಸಹಾಯಧನ ನೀಡಲು ಅವಕಾಶ ಮಾಡಲಾಗಿದೆ.

   b. ರಾಜ್ಯದ ಎಲ್ಲಾ ಒಳನಾಡು ಜಿಲ್ಲೆಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದ್ರಿ ಯೋಜನೆಯಡಿ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಇದರ ಘಟಕ ವೆಚ್ಚ ರೂ.10,000/- ಗಳಾಗಿದ್ದು ಶೇ.100 ರಷ್ಟು ಸಹಾಯಧನ ನೀಡಲಾಗವುದು.

   c. ಮೀನುಗಾರರ ಹಾಗೂ ಮೀನುಗಾರರ ದೋಣಿಗಳ ಸುರಕ್ಷತೆಯ ನಿಟ್ಟಿನಲ್ಲಿ ಮೀನುಗಾರಿಕೆ ದೋಣಿಗಳಿಗೆ ಇಸ್ರೋ ಅಧಿಕೃತಗೊಳಿಸಿರುವ ಡಿ.ಎ.ಟಿ. ಉಪಕರಣವನ್ನು ಶೇ.50 ರಷ್ಟು ಸಹಾಯಧನ ನೀಡಿ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುವುದು.

11. **ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ**

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಘಟಕಕ್ಕೆ ವಾರ್ಷಿಕ ಗರಿಷ್ಠ ರೂ.3.00 ಲಕ್ಷ ಸಹಾಯಧನ ನೀಡಲಾಗುವುದು.

12. **ಮೀನುಗಾರರ ಕಲ್ಯಾಣ ಯೋಜನೆಗಳು (ಕೇಂದ್ರ ಪುರಸ್ಕೃತ ಯೋಜನೆ)**

ಅ) **ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ** ಉಳಿತಾಯ ಹಾಗೂ ಪರಿಹಾರ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/- ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/- ಮತ್ತು ರಾಜ್ಯ ಸರ್ಕಾರ ರೂ.1500/- ಸೇರಿಸಿ ಹೀಗೆ ಒಟ್ಟು ರೂ.4500/- ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು.

ಆ) **ಸಾಮೂಹಿಕ ವಿಮಾ ಯೋಜನೆ:** ರಾಜ್ಯದ 2.04 ಲಕ್ಷ ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲು ರಾಜ್ಯದ ವಿಮಾ ಕಂತನ್ನು ಪಾವತಿಸಲು ಅನುದಾನ ಒದಗಿಸಲಾಗಿದೆ. ಈ ಯೋಜನೆಯಡಿ ವಿಮಾ ಸೌಲಭ್ಯವನ್ನು ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.200,000/- ಗಳ ಪರಿಹಾರ ಮತ್ತು ಭಾಗಶಃ

ಅಂಗವಿಕಲರಾದವರಿಗೆ ರೂ.100,000 ಗಳ ಪರಿಹಾರ ನೀಡಲಾಗುವುದು. ವಿಮಾ ಕಂತಿನ ಹಣ ಪ್ರತಿ ವರ್ಷ ದೆಹಲಿಯಲ್ಲಿರುವ ಮೀನುಗಾರರ ಸಹಕಾರ ಸಂಘಗಳ ರಾಷ್ಟ್ರೀಯ ಮಂಡಳಿ, ದೆಹಲಿಗೆ ಬಿಡುಗಡೆ ಮಾಡಲಾಗುವುದು.

12. **ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು** ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ಅಲ್ಪಾವಧಿ ಸಾಲ ತೆಗೆದುಕೊಂಡು ಕೈಗೊಳ್ಳಲು ಅನುಕೂಲವಾಗುವಂತೆ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ಮೀನುಗಾರರು ರೂ.50,000 ಗಳ ವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ.

ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ನೀಡುತ್ತಿರುವ ಸಾಲವನ್ನು 2018-19ನೇ ಸಾಲಿನಿಂದ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ.

13. **ಮೀನುಗಾರಿಕೆ ಕೂಡು ರಸ್ತೆಗಳ ನಿರ್ವಹಣೆ** ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಮಳೆ ಹಾಗೂ ಮೀನು ಸಾಗಾಣಿಕೆಯಿಂದ ಈ ಮೀನುಗಾರಿಕೆ ಕೊಂಡಿ ರಸ್ತೆಗಳು ಹಾಳಾಗುತ್ತದೆ. ಇವುಗಳ ದುರಸ್ತಿ ಹಾಗೂ ನಿರ್ವಹಣೆಯನ್ನು ಕೈಗೊಳ್ಳಲಾಗುವುದು.

14. **ಗಿರಿ ಜನ ಉಪ ಯೋಜನೆ** ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಅನುಕೂಲವಾಗುವಂತೆ ಸಂಚಾರಿ/ ರೀಟೇಲ್ ಮೀನು ಖಾದ್ಯಗಳ ಕ್ಯಾಂಟೀನ್/ ತಾಜಾ ಮೀನು ಮಾರಾಟ ಮಳಿಗೆ ಸ್ಥಾಪಿಸಲು ಸಹಾಯ (ಘಟಕ ವೆಚ್ಚ ರೂ.10.00 ಲಕ್ಷ ; ಸಹಾಯಧನ : ಶೇ.70 ರಷ್ಟು ಗರಿಷ್ಠ ರೂ.7.00 ಲಕ್ಷ) ನೆರವು ನೀಡಲಾಗುವುದು.

<u>ಕಾಮಗಾರಿಗಳು</u>

15. **ಮೀನುಗಾರಿಕೆ ಬಂದರುಗಳ ಹೂಳೆತ್ತುವಿಕೆ(ಕೇಂದ್ರ ಪುರಸ್ಕೃತ ಯೋಜನೆ)** ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣಗಳಲ್ಲಿ ಮೀನುಗಾರಿಕೆ ದೋಣಿಗಳ ಸುಗಮ ಸಂಚಾರಕ್ಕೆ ಅನುಕೂಲವಾಗಲು ಹೂಳೆತ್ತಲು ಅವಕಾಶ ಕಲ್ಪಿಸಲಾಗಿದೆ. ಕೇಂದ್ರ ಸರ್ಕಾರವು ಪ್ರತಿಶತ 50 ರಷ್ಟನ್ನು ಯೋಜನಾ ವೆಚ್ಚವನ್ನು ಮತ್ತು ರಾಜ್ಯ ಸರ್ಕಾರವು ಪ್ರತಿಶತ 50 ರಷ್ಟನ್ನು ಯೋಜನಾ ವೆಚ್ಚವನ್ನು ಭರಿಸುತ್ತದೆ. ಕೇಂದ್ರ ಸರ್ಕಾರದಿಂದ ಮಂಜೂರಾದ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗುವುದು.

16. **ಮೀನುಗಾರಿಕೆ ಬಂದರುಗಳ ನಿರ್ಮಾಣ (ಕೇಂದ್ರ ಪುರಸ್ಕೃತ ಯೋಜನೆ)** ಮಂಜೂರಾದ ಮೀನುಗಾರಿಕೆ ಬಂದರುಗಳ ಕಾಮಗಾರಿ ಮುಂದುವರಿಕೆಗೆ ಹಾಗೂ ಹೊಸ ಯೋಜನೆಗಳ ಕೈಗೊಳ್ಳಲು ಅವಕಾಶ ಮಾಡಲಾಗಿದೆ. ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಕೇಂದ್ರ ಸರ್ಕಾರವು ಪ್ರತಿಶತ 50 ರಷ್ಟು ಮತ್ತು ರಾಜ್ಯ ಸರ್ಕಾರವು ಪ್ರತಿಶತ 50 ರಷ್ಟನ್ನು ಭರಿಸುತ್ತದೆ. ಈಗಾಗಲೇ ಮಂಜೂರಾದ ಯೋಜನೆಗಳು 75:25 ಅನುಪಾತದಲ್ಲಿಯೇ ಮುಂದುವರೆಯುತ್ತದೆ.

17. **ಮೀನುಗಾರಿಕೆ ಜೆಟ್ಟಿ ಮತ್ತು ಇಳಿದಾಣಗಳ ನಿರ್ಮಾಣ ಮತ್ತು ನವೀಕರಣ** ಮೀನುಗಾರಿಕೆ ಇಳಿದಾಣ ಕೇಂದ್ರಗಳ ನಿರ್ಮಾಣ ಹಾಗೂ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಲೆಕ್ಕ ಶೀರ್ಷಿಕೆಯಡಿ ಪ್ರಗತಿಯಲ್ಲಿರುವ ಕೊಡೇರಿ ಮೀನುಗಾರಿಕೆ ಬಂದರಿನ ಹಾಗೂ ತೆಂಗಿನಗುಂಡಿ ಅಳ್ವೆಕೋಡಿ ಮೀನುಗಾರಿಕೆ ತಂಗುದಾಣದ ಕಾಮಗಾರಿಗಳನ್ನು ಮುಂದುವರಿಸಲು ಹಾಗೂ ಮರವಂತೆ, ಶಿರೂರು-ಅಳ್ವೆಗದ್ದೆ ಮತ್ತು ಕುಂದಾಪುರ ಕೋಡಿಯಲ್ಲಿ ಬಂದರು ಮತ್ತು ತಡೆಗೋಡೆಗಳ ಕಾಮಗಾರಿಗಳನ್ನು ಪ್ರಾರಂಭಿಸಲು ಹಾಗೂ ಭಟ್ಕಳ ಮತ್ತು ಕಾರವಾರ ಮೀನುಗಾರಿಕೆ ಬಂದರುಗಳಲ್ಲಿಯ ಧಕ್ಕೆಗಳನ್ನು ವಿಸ್ತರಿಸಲು ಅನುದಾನ ನೀಡಲಾಗಿದೆ. ಆಮದಳ್ಳಿ ಮೀನುಗಾರಿಕೆ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಶೇ.75 ರಷ್ಟು ನೆರವಿನೊಂದಿಗೆ ಕೈಗೊಳ್ಳಲಾಗುವುದು.

18. ಮೀನುಗಾರಿಕೆ ಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ ಈ ಲೆಕ್ಕ ಶೀರ್ಷಿಕೆಯಡಿ ನಬಾರ್ಡ್ ನೆರವಿನೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಮೀನುಗಾರಿಕೆ ರಸ್ತೆ, ಸೇತುವೆ ಮತ್ತು ಜೆಟ್ಟಿಗಳ ನಿರ್ಮಾಣ, ಶುಚಿಯಾದ ಮೀನುಮಾರುಕಟ್ಟೆಗಳ ನಿರ್ಮಾಣ, ಮೀನು ಮರಿ ಉತ್ಪಾದನಾ ಕೇಂದ್ರಗಳ ಆಧುನೀಕರಣ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಮಂಜೂರಾದ ಕಾಮಗಾರಿಗಳನ್ನು ಪ್ರಾರಂಭಿಸಲು/ ಮುಂದುವರಿಸಲು ಅನುದಾನ ಒದಗಿಸಲಾಗಿದೆ.

<u>ಜಿಲ್ಲಾ ಪಂಚಾಯತ್ ಯೋಜನೆಗಳು</u>

1. **ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ:** ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ ನಿರ್ವಹಣೆ ವೆಚ್ಚ ಮತ್ತು ಇತರ ಸಾಮಗ್ರಿಗಳ ಖರೀದಿಗೆ ಅನುದಾನವನ್ನು ಒದಗಿಸಲಾಗಿದೆ.

2. **ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ:** ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/- ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

3. **ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ**

ಮೀನುಗಾರರು ಮೀನನ್ನು ತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯ ಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.10000/- ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000 ಗಳ

ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.35,000 ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

4. ಪ್ರದರ್ಶನ ಮತ್ತು ತರಬೇತಿ ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು.

ಈ ಯೋಜನೆಗಳಲ್ಲದೆ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನು ಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ, ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ, ಫೈಬರ್ ಗ್ಲಾಸ್ ಹರಿಗೋಲು ವಿತರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- ಕೆರೆಗಳ ಅಭಿವೃದ್ಧಿ:

ರಾಜ್ಯದಲ್ಲಿರುವ ಒಳನಾಡು ಜಲಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲು ಹೊಸ ಗುತ್ತಿಗೆ ನಿಯಮಾವಳಿಗಳನ್ನು ರೂಪಿಸಿದ್ದು, ಈ ನಿಯಮಾವಳಿ ಪ್ರಕಾರ ಈ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ಗುತ್ತಿಗೆಯನ್ನು ಪಡೆಯಲು ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘಗಳಿಗೆ ಅವಕಾಶ ಕಲ್ಪಿಸಲಾಗಿದೆ. ಗುತ್ತಿಗೆಗೆ ಕೋರದ ಕೆರೆಗಳನ್ನು ಸಾರ್ವಜನಿಕವಾಗಿ ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸಲಾಗುವುದು. ಕೆರಗಳ ಶೇ.50ರ ಜಲ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಪ್ರತಿ ಹೆಕ್ಟೇರ್ ಜಲ ವಿಸ್ತೀರ್ಣಕ್ಕೆ ರೂ.300/- ರಂತೆ ಹಾಗೂ ಹಿಂದಿನ 3 ವರ್ಷಗಳ ಸರಾಸರಿ ಗುತ್ತಿಗೆ ಮೊತ್ತ, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತವನ್ನು ಗುತ್ತಿಗೆ ಮೊತ್ತವಾಗಿ ನಿಗದಿಪಡಿಸಿ ಗರಿಷ್ಠ 5 ವರ್ಷಗಳ ಅವಧಿಗೆ ಮೀನುಕೃಷಿಗೆ ನೀಡಲಾಗುವುದು.

ಅನುಬಂಧ-2

ಜಿಲ್ಲೆಯ ಹೆಸರು: ಕೋಲಾರ

ರೂ.ಲಕ್ಷಗಳಲ್ಲಿ

ಕ್ರ.ಸಂ	ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ	ತಾಲ್ಲೂಕು	2017-18				2018-19				2019-20 (Feb 2020)			
				ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ
1	ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	2405-00-101-0-03	ಕೋಲಾರ	22.14	22.14	22.14	5	7.08	7.08	7.08	2	16.16	16.16	4.41	2
			ಕೆ.ಜಿ.ಎಫ್	-	-	-	-	-	-	-	-	-	-	-	-
			ಬಂಗಾರುಪೇಟೆ	-	-	-	-	3.40	3.40	3.40	1	-	-	-	-
			ಮಾಲೂರು	22.34	22.34	22.34	4	-	-	-	-	7.25	7.25	7.25	1
			ಮುಳಬಾಗಲು	30.51	30.51	30.51	5	4.17	4.17	4.17	1	-	-	-	-
			ಶ್ರೀನಿವಾಸಪುರ	14.75	14.75	14.75	4	-	-	-	-	-	-	-	-
	ಒಟ್ಟು			89.74	89.74	89.74	18	14.64	14.64	14.64	4	23.41	23.41	11.66	3
2	ಮೀನು ಮರಿ ಖರೀದಿಸಲು ನೆರವು	2405-00-101-0-28	ಕೋಲಾರ	-	-	-	-	-	-	-	-	-	-	-	-
			ಕೆ.ಜಿ.ಎಫ್	0.13	0.13	0.13	6	0.215	0.21	0.21	5	0.125	0.125	0.125	1
			ಬಂಗಾರುಪೇಟೆ	-	-	-	-	-	-	-	-	-	-	-	-
			ಮಾಲೂರು	0.18	0.18	0.18	2	-	-	-	-	0.03	0.03	0.03	4
			ಮುಳಬಾಗಲು	-	-	-	-	-	-	-	-	-	-	-	-
			ಶ್ರೀನಿವಾಸಪುರ	0.25	0.25	0.25	5	-	-	-	-	0.196	0.196	0.049	3
	ಒಟ್ಟು			0.56	0.56	0.56	13	0.215	0.21	0.21	5	0.351	0.351	0.204	8
3	ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ	2405-00-101-0-54	ಕೆ.ಜಿ.ಎಫ್	-	-	-	-	-	-	-	2.00	-	-	-	-
	ಒಟ್ಟು			-	-	-	-	-	-	-	2.00	-	-	-	-
4	ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ	2405-00-101-0-56	ಕೋಲಾರ	0.14	0.14	0.14	2	0.20	0.20	0.20	2	-	-	-	-
			ಕೆ.ಜಿ.ಎಫ್	0.14	0.14	0.14	2	0.20	0.20	0.20	2	-	-	-	-
			ಬಂಗಾರುಪೇಟೆ	-	-	-	-	0.20	0.20	0.20	2	-	-	-	-
			ಮಾಲೂರು	0.14	0.14	0.14	2	0.20	0.20	0.20	2	-	-	-	-
			ಮುಳಬಾಗಲು	0.14	0.14	0.14	2	0.20	0.20	0.20	2	-	-	-	-
			ಶ್ರೀನಿವಾಸಪುರ	0.43	0.43	0.43	6	0.20	0.20	0.20	2	-	-	-	-
	ಒಟ್ಟು			1.00	1.00	1.00	14	1.20	1.20	1.20	12	-	-	-	-

ಕ್ರ.ಸಂ	ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ	ತಾಲ್ಲೂಕು	2017-18				2018-19				2019-20 (Feb 2020)			
				ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ
5	ನೀಲಿ ಕ್ರಾಂತಿ	2405-00-101-0-58	ಕೋಲಾರ	2.40	2.40	2.40	8	–	–	–	–	2.00	2.00	2.00	4
			ಕೆ.ಜಿ.ಎಫ್	–	–	–	–	–	–	–	–	2.88	2.88	2.88	12
			ಬಂಗಾರುಪೇಟೆ	–	–	–	–	6.13	6.13	6.13	1	–	–	–	–
			ಮಾಲೂರು	–	–	–	–	–	–	–	–	–	–	–	–
			ಮುಳಬಾಗಲು	–	–	–	–	3.31	3.31	3.31	2	–	–	–	–
			ಶ್ರೀನಿವಾಸಪುರ	–	–	–	–	–	–	–	–	–	–	–	–
	ಒಟ್ಟು			2.40	2.40	2.40	8	9.44	9.44	9.44	3	4.88	4.88	4.88	16
6	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ	2405-00-101-0-66	ಕೋಲಾರ	7.03	7.03	7.03	43	–	–	–	–	–	–	–	–
			ಕೆ.ಜಿ.ಎಫ್	13.26	13.26	13.26	23	–	–	–	–	–	–	–	–
			ಬಂಗಾರುಪೇಟೆ	0.57	0.57	0.57	6	–	–	–	–	–	–	–	–
			ಮಾಲೂರು	1.43	1.43	1.43	15	–	–	–	–	–	–	–	–
			ಮುಳಬಾಗಲು	1.03	1.03	1.03	13	–	–	–	–	–	–	–	–
			ಶ್ರೀನಿವಾಸಪುರ	1.43	1.43	1.43	15	0.20	0.20	0.20	1	–	–	–	–
	ಒಟ್ಟು			24.75	24.75	24.75	115	0.20	0.20	0.20	1	–	–	–	–
7	ಸಂಶೋಧನೆ, ವಿಸ್ತರಣೆ ಪ್ರದರ್ಶನ ಮತ್ತು ತರಬೇತಿ	2405-00-109-0-01	ಕೋಲಾರ	–	–	–	–	0.20	0.20	0.20	1	–	–	–	–
			ಕೆ.ಜಿ.ಎಫ್	–	–	–	–	–	–	–	–	–	–	–	–
			ಬಂಗಾರುಪೇಟೆ	–	–	–	–	–	–	–	–	–	–	–	–
			ಮಾಲೂರು	0.10	0.10	0.10	1	–	–	–	–	–	–	–	–
			ಮುಳಬಾಗಲು	–	–	–	–	–	–	–	–	0.20	0.20	0.20	1
			ಶ್ರೀನಿವಾಸಪುರ	0.10	0.10	0.10	1	–	–	–	–	–	–	–	–
	ಒಟ್ಟು			0.20	0.20	0.20	2	0.20	0.20	0.20	1	0.20	0.20	0.20	1
8	ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ	2405-00-110-0-02	ಕೋಲಾರ	0.20	0.20	0.20	2	0.30	0.30	0.30	3	1.20	1.20	1.20	12
			ಕೆ.ಜಿ.ಎಫ್	0.30	0.30	0.30	3	0.40	0.40	0.40	4	0.80	0.80	0.80	8
			ಬಂಗಾರುಪೇಟೆ	0.20	0.20	0.20	2	–	–	–	–	0.40	0.40	0.40	4
			ಮಾಲೂರು	0.20	0.20	0.20	2	0.30	0.30	0.30	3	1.00	1.00	1.00	10

ಕ್ರ.ಸಂ	ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ	ತಾಲ್ಲೂಕು	2017–18				2018–19				2019–20 (Feb 2020)			
				ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ
			ಮುಳಬಾಗಲು	0.20	0.20	0.20	2	0.20	0.20	0.20	2	1.00	1.00	1.00	10
			ಶ್ರೀನಿವಾಸಪುರ	0.30	0.30	0.30	3	0.30	0.30	0.30	3	1.00	1.00	1.00	10
		ಒಟ್ಟು		1.40	1.40	1.40	14	1.50	1.50	1.50	15	5.40	5.40	5.40	54
9	ವಿಶೇಷ ಘಟಕ ಉಪ ಯೋಜನೆ	2405–00–789–0–03	ಕೋಲಾರ	–	–	–	–	–	–	–	–	–	–	–	–
			ಕೆ.ಜಿ.ಎಫ್	–	–	–	–	–	–	–	–	–	–	–	–
			ಬಂಗಾರುಪೇಟೆ	–	–	–	–	–	–	–	–	–	–	–	–
			ಮಾಲೂರು	–	–	–	–	–	–	–	–	–	–	–	–
			ಮುಳಬಾಗಲು	–	–	–	–	–	–	–	–	–	–	–	–
			ಶ್ರೀನಿವಾಸಪುರ	–	–	–	–	–	–	–	–	–	–	–	–
		ಒಟ್ಟು		–	–	–	–	–	–	–	–	–	–	–	–
10	ಗಿರಿಜನ ಉಪಯೋಜನೆ	2405–00–796–0–00	ಮಾಲೂರು	4.40	4.40	4.40	1	7.00	7.00	7.00	1	–	–	–	–
		ಒಟ್ಟು		4.40	4.40	4.40	1	7.00	7.00	7.00	1				
11	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	2401–00–800–1–57	ಕೋಲಾರ	1.15	1.15	1.15	14	0.90	0.90	0.90	9	0.70	0.30	0.30	7
			ಕೆ.ಜಿ.ಎಫ್	1.21	1.21	1.21	17	0.80	0.80	0.80	8	0.50	0.20	0.20	5
			ಬಂಗಾರುಪೇಟೆ	0.20	0.20	0.20	2	0.60	0.60	0.60	6	0.20	0.10	0.10	2
			ಮಾಲೂರು	1.29	1.29	1.28	14	0.70	0.70	0.70	7	0.70	0.30	0.30	7
			ಮುಳಬಾಗಲು	0.65	0.65	0.64	7	0.40	0.40	0.40	4	0.70	0.30	0.30	7
			ಶ್ರೀನಿವಾಸಪುರ	1.50	1.50	1.50	15	0.80	0.80	0.80	8	0.70	0.30	0.30	7
		ಒಟ್ಟು		6.00	6.00	5.98	69	4.20	4.20	4.20	42	3.50	1.50	1.50	35
ಜಿಲ್ಲಾ ಪಂಚಾಯತ್ ಯೋಜನೆಗಳು															
1	ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	2405–00–101–0–28	ಕೋಲಾರ	1.00	1.00	1.00	10	1.20	1.20	1.20	12	2.00	2.00	2.00	20
			ಕೆ.ಜಿ.ಎಫ್	1.00	1.00	1.00	10	1.20	1.20	1.20	12	1.20	1.20	1.20	12
			ಬಂಗಾರುಪೇಟೆ	–	–	–	–	0.40	0.40	0.40	4	0.80	0.80	0.80	8
			ಮಾಲೂರು	1.00	1.00	1.00	10	1.00	1.00	1.00	10	2.00	2.00	2.00	20
			ಮುಳಬಾಗಲು	1.00	1.00	1.00	10	1.20	1.20	1.20	12	2.00	2.00	2.00	20

ಸಂ	ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ	ತಾಲ್ಲೂಕು	2017-18				2018-19				2019-20 (Feb 2020)			
				ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	ಭೌತಿಕ	ಅನುದಾನ	ಬಿಡುಗಡೆ	ವೆಚ್ಚ	(ತಿಕ
			ಶ್ರೀನಿವಾಸಪುರ	1.00	1.00	1.00	10	1.00	1.00	1.00	10	2.00	2.00	2.00	20
	ಒಟ್ಟು			5.00	5.00	5.00	50	6.00	6.00	6.00	60	10.00	10.00	10.00	100
2	ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ	2405-00-101-0-30	ಕೋಲಾರ	0.44	0.44	0.44	22	0.62	0.62	0.60	2	1.60	1.60	–	–
			ಕೆ.ಜಿ.ಎಫ್	0.28	0.28	0.28	14	0.76	0.76	0.76	3	1.00	1.00	–	10
			ಬಂಗಾರುಪೇಟೆ	0.16	0.16	0.16	8	0.78	0.78	0.78	3	0.60	0.60	–	6
			ಮಾಲೂರು	0.32	0.32	0.32	16	0.60	0.60	0.60	2	1.60	1.60	–	–
			ಮುಳಬಾಗಲು	0.50	0.50	0.50	25	0.62	0.62	0.62	3	1.60	1.60	–	–
			ಶ್ರೀನಿವಾಸಪುರ	0.30	0.30	0.30	15	0.62	0.62	0.62	3	1.60	1.60	–	–
	ಒಟ್ಟು			2.00	2.00	2.00	100	4.00	4.00	3.97	16	8.00	8.00	–	16
3	ಪ್ರದರ್ಶನಗಳು ಮತ್ತು ತರಬೇತಿ	2405-00-101-0-32	ಕೋಲಾರ	3.60	3.60	3.29	–	4.60	4.60	4.55	–	6.00	6.00	1.91	–
			ಕೆ.ಜಿ.ಎಫ್	0.10	0.10	0.10	–	0.10	0.10	0.10	–	0.50	0.50	–	–
			ಬಂಗಾರುಪೇಟೆ	–	–	–	–	–	–	–	–	–	–	–	–
			ಮಾಲೂರು	0.10	0.10	0.10	–	0.10	0.10	0.10	–	0.50	0.50	–	–
			ಮುಳಬಾಗಲು	0.10	0.10	0.10	–	0.10	0.10	0.10	–	0.50	0.50	–	–
			ಶ್ರೀನಿವಾಸಪುರ	0.10	0.10	0.10	–	0.10	0.10	0.10	–	0.50	0.50	0.10	–
	ಒಟ್ಟು			4.00	4.00	3.69	–	5.00	5.00	4.95	–	8.00	8.00	2.01	–

ಕರ್ನಾಟಕ ಸರ್ಕಾರ

13

ಸಂಖ್ಯೆ:ಪಸಂಮೀ ಇ-98 ಮೀಇಯೋ 2020 ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 21-03-2020

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು-1.

ಮಾನ್ಯರೆ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2846 ಕ್ಕೆ ಉತ್ತರ ಒದಗಿಸುವ ಬಗ್ಗೆ.

******

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2846 ಕ್ಕೆ ಸಂಬಂಧಿಸಿದ ಕನ್ನಡ ಭಾಷೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

Kamakshi U.A 21/3/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2846
2) ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
3) ಉತ್ತರಿಸುವ ದಿನಾಂಕ : 23-03-2020
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ತಾಲ್ಲೂಕು ಆಯನೂರು ಗೌಡನ ಕೆರೆಯನ್ನು ಖಾಸಗಿ ಸಹಕಾರ ಸಂಘಕ್ಕೆ ಅತೀ ಕಡಿಮೆ ದರಕ್ಕೆ ಮೀನು ಪಾಶುವಾರು ಗಾಗಿ ಹರಾಜು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕು ಆಯನೂರು ಗೌಡನ ಕೆರೆಯನ್ನು ಮಹಿಳಾ ಮೀನುಗಾರರ ಸಹಕಾರ ಸಂಘ, ಗುರುಪುರ ಇವರಿಗೆ 2019-20 ರಿಂದ 5 ವರ್ಷಗಳ ಅವಧಿಗೆ ನಿಯಮಾನುಸಾರ ಕೆಳಕಂಡಂತೆ ಗುತ್ತಿಗೆ ಮೊತ್ತ ನಿಗದಿಪಡಿಸಿ ಗುತ್ತಿಗೆಗೆ ನೀಡಲಾಗಿದೆ. 2018-19 – ರೂ.5222-00 2019-20 – ರೂ.5483-00 2020-21 – ರೂ.5757-00 2021-22 – ರೂ. 6045-00 2022-23 – ರೂ.6,347-00 ಈ ಸಂಘವು ಸಹಕಾರಿ ಕಾಯ್ದೆ 1959 ಮತ್ತು ನಿಯಮಗಳು 1960 ರಡಿಯಲ್ಲಿ ನೊಂದಣಿ ಸಂಖ್ಯೆ:ಎಆರ್/24/ನೊಂದಣಿ/ಸಿಆರ್/141/ 30080/2009-10 ದಿ:27-01-2010 ರಲ್ಲಿ ನೋಂದಾಯಿತ ಸಹಕಾರ ಸಂಘವಾಗಿರುತ್ತದೆ.
ಆ)	ಬಂದಿದ್ದಲ್ಲಿ, ಸದರಿ ಕೆರೆಯನ್ನು ಮೀನುಮರಿ ಸಾಕಾಣಿಕೆಗೆ ಹೆಚ್ಚಿನ ದರಕ್ಕೆ ಒಳ ಗುತ್ತಿಗೆ ನೀಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಅಧಿಕಾರಿ ಹಾಗೂ ಸಂಬಂಧಿಸಿದವರ ವಿರುದ್ಧ ಕೈಗೊಳ್ಳುವ ಕ್ರಮಗಳೇನು; (ವಿವರ ನೀಡುವುದು)	ಕೆರೆಗಳನ್ನು ಗುತ್ತಿಗೆ ನೀಡುವಾಗ ಗುತ್ತಿಗೆ ಮೊತ್ತವನ್ನು ಚಾಲ್ತಿಯಲ್ಲಿರುವ ನಿಯಮಗಳಂತೆ ಉಪಯುಕ್ತ ಜಲವಿಸ್ತೀರ್ಣದ ಆಧಾರದ ಮೇಲೆ ನಿಗದಿಪಡಿಸಲಾಗಿದೆ. ಒಳನಾಡು ಜಲಸಂಪನ್ಮೂಲಗಳ ವಿಲೇವಾರಿ ಕಾರ್ಯನೀತಿ-2014 ರಲ್ಲಿ ಪ್ರತಿ ಹೆ. ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಮೊದಲ ವರ್ಷ ರೂ.300/- ರಂತೆ 17.4 ಹೆಕ್ಟೇರ್ ಗಳಿಗೆ 5222.00 ರೂ.ಗಳನ್ನು ಗುತ್ತಿಗೆ ಮೊತ್ತವಾಗಿ ನಿಗದಿಪಡಿಸಿದೆ. ತದನಂತರದ ನಾಲ್ಕು ವರ್ಷಗಳಿಗೆ ಶೇ.5 ರಷ್ಟು ಹೆಚ್ಚಿಸಿ ವಾರ್ಷಿಕ ನವೀಕರಣ ಆದೇಶ ನೀಡಲಾಗುವುದು. ಗುತ್ತಿಗೆ ಮೊತ್ತವನ್ನು ಚಾಲ್ತಿಯಲ್ಲಿರುವ ನಿಯಮಾವಳಿಗಳಂತೆ ನಿಗದಿಪಡಿಸುವುದರಿಂದ ಅಧಿಕಾರಿಗಳ ಹಸ್ತಕ್ಷೇಪಕ್ಕೆ ಅವಕಾಶವಿರುವುದಿಲ್ಲ.
ಇ)	ಪಾರದರ್ಶಕವಾಗಿ ಕೆರೆಗಳ ಹರಾಜು ಮಾಡಲು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಕೆರೆಗಳ ವಿಲೇವಾರಿಗಾಗಿ ಕಾರ್ಯನೀತಿ-2014 ಅನ್ನು ಆದೇಶ ಸಂಖ್ಯೆ:ಪಸಂಮೀ:125:ಮೀಇಇ:2013, ದಿ:21.02.2014 ರಂತೆ ಜಾರಿಗೆ ತರಲಾಗಿದೆ. ಈ ಕಾರ್ಯನೀತಿಯಲ್ಲಿ ಅಳವಡಿಸಿರುವ ಪಾರದರ್ಶಕ ನಿಯಮಾವಳಿಗಳನ್ವಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಪಾರದರ್ಶಕವಾಗಿವಿಲೇ ಮಾಡಲಾಗುತ್ತಿದೆ.

ಸಂಖ್ಯೆ: ಪಸಂಮೀ ಇ-98 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 10 ಎಲ್‌ಆರ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21.03.2020.

79

23/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಮಹೇಶ್.ಸಾ.ರಾ.[ಕೃಷ್ಣರಾಜನಗರ] ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2458 ಕ್ಕೆ ಉತ್ತರ ಒದಗಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಮಹೇಶ್.ಸಾ.ರಾ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2458ಕ್ಕೆ ಉತ್ತರವನ್ನು ಸಿದ್ಧಪಡಿಸಿ, ಅದರ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

21.3-20

(ವಿ.ಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸುಧಾರಣೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2458

ಸದಸ್ಯರ ಹೆಸರು : ಶ್ರೀ ಮಹೇಶ್ ಸಾ.ರಾ. (ಕೃಷ್ಣರಾಜನಗರ)

ಉತ್ತರಿಸುವ ದಿನಾಂಕ : 23.03.2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಯಾವಾಗ ಜಾರಿಗೆ ಬಂದಿರುತ್ತದೆ;	ರಾಜ್ಯದಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ದಿನಾಂಕ:01.03.1974 ರಂದು ಜಾರಿಗೆ ಬಂದಿರುತ್ತದೆ.
(ಆ)	ಈ ಕಾನೂನಿಂದ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 4,75,801 ಲಕ್ಷ ಫಲಾನುಭವಿಗಳು ಉಳುವವನೇ ಭೂಮಿಯ ಒಡೆಯ ಕಾನೂನಿನಿಂದ ಪ್ರಯೋಜನ ಪಡೆದಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ:ಕಂಇ 10 ಎಲ್ಆರ್ಎಸ್ 2020

(ಆರ್.ಅಶೋಕ)
ಮಾನ್ಯ ಕಂದಾಯ ಸಚಿವರು

ಅನುಬಂಧ

ರಾಜ್ಯದಲ್ಲಿ ಉಳುವವನೇ ಭೂಮಿಯ ಒಡೆಯ ಕಾನೂನಿನಿಂದ ಪ್ರಯೋಜನ ಪಡೆದ ಫಲಾನುಭವಿಗಳ ವಿವರ:

ಕ್ರಮ ಸಂಖ್ಯೆ	ವಿಭಾಗದ ಹೆಸರು	ಜಿಲ್ಲೆಯ ಹೆಸರು	ಭೂನ್ಯಾಯ ಮಂಡಳಿಗಳಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ
1.	ಬೆಂಗಳೂರು ವಿಭಾಗ	1) ಬೆಂಗಳೂರು ನಗರ	17,702
		2) ಬೆಂಗಳೂರು ಗ್ರಾಮಾಂತರ	1,154
		3) ಕೋಲಾರ	6,911
		4) ಚಿತ್ರದುರ್ಗ	1,482
		5) ಚಿಕ್ಕಬಳ್ಳಾಪುರ	10,258
		6) ರಾಮನಗರ	8,847
		7) ದಾವಣಗೆರೆ	582
		8) ತುಮಕೂರು	6,017
		9) ಶಿವಮೊಗ್ಗ	33,987
		ಒಟ್ಟು	**86,940**
2.	ಮೈಸೂರು ವಿಭಾಗ	10) ಮೈಸೂರು	16,454
		11) ಮಂಡ್ಯ	8,759
		12) ಚಾಮರಾಜನಗರ	4,199
		13) ಹಾಸನ	12,364
		14) ದಕ್ಷಿಣ ಕನ್ನಡ	73,832
		15) ಉಡುಪಿ	722
		16) ಕೊಡಗು	1,458
		17) ಚಿಕ್ಕಮಗಳೂರು	10,981
		ಒಟ್ಟು	**1,28,769**
3.	ಕಲಬುರಗಿ ವಿಭಾಗ	18) ಕಲಬುರಗಿ	11,741
		19) ಯಾದಗಿರಿ	4,276
		20) ಬಳ್ಳಾರಿ	6,813
		21) ರಾಯಚೂರು	1,826
		22) ಕೊಪ್ಪಳ	8,876
		23) ಬೀದರ್	8,738
		ಒಟ್ಟು	**42,270**
4.	ಬೆಳಗಾವಿ ವಿಭಾಗ	24) ಬೆಳಗಾವಿ	61,008
		25) ಧಾರವಾಡ	11,435
		26) ಹಾವೇರಿ	20,459
		27) ವಿಜಯಪುರ	11,328
		28) ಗದಗ	6,219
		29) ಬಾಗಲಕೋಟೆ	15,903
		30) ಉತ್ತರ ಕನ್ನಡ (ಕಾರವಾರ)	91,470
		ಒಟ್ಟು	**2,17,822**
		04 ಪ್ರಾದೇಶಿಕ ವಿಭಾಗಗಳ ಒಟ್ಟು ಮಾಹಿತಿ	**4,75,801**

71

ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ ಇ-88 ಮೀಇಯೋ 2020 ಕರ್ನಾಟಕ ಸರ್ಕಾರದ ಸಚಿವಾಲಯ

ವಿಕಾಸಸೌಧ,

ಬೆಂಗಳೂರು, ದಿನಾಂಕ: 21-03-2020

23/3

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು-1.

ಮಾನ್ಯರೆ,

ವಿಷಯ:- ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಲಿಂಗೇಶ್ ಎಸ್. (ಬೇಲೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2087 ಕ್ಕೆ ಉತ್ತರ ಒದಗಿಸುವ ಬಗ್ಗೆ.

******

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಲಿಂಗೇಶ್ ಎಸ್. (ಬೇಲೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2087 ಕ್ಕೆ ಸಂಬಂಧಿಸಿದ ಕನ್ನಡ ಭಾಷೆಯ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

Kamakshi U.A. 21/3/2020
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2087
2) ಸದಸ್ಯರ ಹೆಸರು : ಶ್ರೀ ಲಿಂಗೇಶ್ ಎಸ್. (ಬೇಲೂರು)
3) ಉತ್ತರಿಸುವ ದಿನಾಂಕ : 23-03-2020
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕುಗಳಲ್ಲಿರುವ ಮೂರು ಜಲಾಶಯಗಳು ಸುಮಾರು 62469 ಹೇ.ಜಲ ವಿಸ್ತೀರ್ಣ ಹೊಂದಿದ್ದರೂ ಜಿಲ್ಲೆಯಲ್ಲಿ ಮೀನುಮರಿ ಉತ್ಪಾದನಾ ಕೇಂದ್ರಗಳಿಲ್ಲದ ಕಾರಣ, ಅಗತ್ಯ ಪ್ರಮಾಣದಲ್ಲಿ ಮೀನುಮರಿಗಳನ್ನು ಒದಗಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹಾಸನ ಜಿಲ್ಲೆಯಲ್ಲಿ ಮೀನುಗಾರಿಕೆಗೆ ಈ ಕೆಳಕಂಡ ಜಲಸಂಪನ್ಮೂಲಗಳು ಲಭ್ಯವಿರುತ್ತದೆ.

<table>
<tr><th>ಕ್ರ ಸಂ</th><th>ಜಲಸಂಪನ್ಮೂಲಗಳ ವಿವರ</th><th>ಸಂಖ್ಯೆ ಗಳಲ್ಲಿ</th><th>ವಿಸ್ತೀರ್ಣ (ಹೆಕ್ಟೇರ್)</th></tr>
<tr><td>1)</td><td>ಜಲಾಶಯಗಳು</td><td>3</td><td>9517</td></tr>
<tr><td>2)</td><td>ಸಣ್ಣ ನೀರಾವರಿ ಕೆರೆಗಳು</td><td>166</td><td>41229</td></tr>
<tr><td>3)</td><td>ಗ್ರಾಮ ಪಂಚಾಯ್ತಿ ಕೆರೆಗಳು</td><td>3115</td><td>11723</td></tr>
<tr><td>4)</td><td>ನದಿ ಭಾಗಗಳು</td><td>6</td><td>108</td></tr>
<tr><td></td><td>ಒಟ್ಟು</td><td>3290</td><td>62577</td></tr>
</table>

ಹಾಸನ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮೀನುಮರಿ ಪಾಲನಾ ಕೇಂದ್ರಗಳು

1) ಗೊರೂರು ಮೀನುಮರಿ ಪಾಲನಾ ಕೇಂದ್ರ
2) ಬೇಲೂರು ತಾಲ್ಲೂಕು ಮೀನುಮರಿ ಪಾಲನಾ ಕೇಂದ್ರ
3) ಹಾಸನ ತಾಲ್ಲೂಕು ಮೀನುಮರಿ ಪಾಲನಾ ಕೇಂದ್ರ
4) ರಾಮನಾಥಪುರ ಮೀನುಮರಿ ಪಾಲನ ಕೇಂದ್ರ
5) ಶ್ರೀ ರಾಮದೇವರಕಟ್ಟೆ (ಹೊಳೆನರಸೀಪುರ ತಾ., ಮೀನುಮರಿ ಪಾಲನಾ ಕೇಂದ್ರ)
6) ಚನ್ನರಾಯಪಟ್ಟಣ ಮೀನುಮರಿ ಪಾಲನಾ ಕೇಂದ್ರ
7) ಸಕಲೇಶಪುರ ಮೀನುಮರಿ ಪಾಲನಾ ಕೇಂದ್ರ

ಜಿಲ್ಲೆಯಲ್ಲಿರುವ ಮೀನುಮರಿ ಪಾಲನಾ ಕೇಂದ್ರಗಳಿಂದ ಲಭ್ಯವಾಗುವ ಬಿತ್ತನೆ ಮೀನುಮರಿಗಳನ್ನು ಬೇಡಿಕೆಗನುಗುಣವಾಗಿ ಸ್ಥಳೀಯ ಮೀನು ಕೃಷಿಕರಿಗೆ ಪೂರೈಸಲಾಗುತ್ತಿದೆ.</td></tr>
<tr><td>ಆ)</td><td>ಜಲಾಶಯ/ನದಿ/ಕೆರೆಗಳ ಮೂಲಗಳಿಂದ ಜಿಲ್ಲೆಯಲ್ಲಿ ಪ್ರತಿವರ್ಷ ಉತ್ಪಾದನೆ ಯಾದ ಮೀನುಗಳೆಷ್ಟು (ಟನ್ ಗಳಲ್ಲಿ ಮಾಹಿತಿ ನೀಡುವುದು):</td><td>ಜಿಲ್ಲೆಯಲ್ಲಿ ಪ್ರತಿವರ್ಷ 11614 ಟನ್ ಮೀನು ಉತ್ಪಾದನೆಯಾಗುತ್ತಿದೆ.</td></tr>
</table>

ಇ)	ಮೀನುಗಾರರಿಗೆ/ಇಲಾಖೆಗಳಿಗೆ ಸರಿಯಾದ ಸಮಯಕ್ಕೆ ಮೀನುಮರಿಗಳು ಸಿಗದೇ ಮತ್ಸ್ಯೋದ್ಯಮ ಕುಂಠಿತವಾಗಿರುವುದು ನಿಜವಲ್ಲವೇ;	ಹಾಸನ ಜಿಲ್ಲೆಯಲ್ಲಿ ಮೀನುಮರಿ ಉತ್ಪಾದನಾ ಕೇಂದ್ರಗಳಿಲ್ಲದ ಕಾರಣ ಹೊರ ಜಿಲ್ಲೆಗಳಿಂದ ಸ್ಪಾನ್ ಮತ್ತು ಫ್ರೈ ಮೀನುಮರಿಗಳನ್ನು ತಂದು ಪಾಲನೆ ಮಾಡಿ ಲಭ್ಯವಾಗುವ ಮೀನುಮರಿಗಳನ್ನು ಮೀನು ಕೃಷಿಕರಿಗೆ ಪೂರೈಸಲಾಗುತ್ತಿದೆ. ಮೀನುಮರಿ ಉತ್ಪಾದನೆಗಿಂತ ಬೇಡಿಕೆ ಹೆಚ್ಚಿರುವ ಕಾರಣ ಬೇಡಿಕೆಗೆ ತಕ್ಕಂತೆ ಮೀನುಮರಿಗಳನ್ನು ರಾಜ್ಯದ ಇತರೆ ಮೀನುಮರಿ ಕೇಂದ್ರಗಳಿಂದ ಮತ್ತು ನೊಂದಾಯಿತ ಖಾಸಗಿ ಮೀನುಮರಿ ಪಾಲನಾದಾರರಿಂದ ಸರಬರಾಜು ಮಾಡಿಕೊಂಡು ಬೇಡಿಕೆ ಪೂರೈಸಲಾಗುತ್ತಿದೆ.
ಈ)	ಹಾಸನ ಜಿಲ್ಲೆಯಲ್ಲಿ ಮೀನುಮರಿ ಉತ್ಪಾದನಾ ಕೇಂದ್ರಗಳಿಲ್ಲದಿರುವುದರಿಂದ ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮತ್ಸ್ಯೋದ್ಯಮ ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಹಾಸನ ಜಿಲ್ಲೆಯ ಮತ್ಸ್ಯೋದ್ಯಮಕ್ಕೆ ಪ್ರೋತ್ಸಾಹ ನೀಡಲು, ಜಿಲ್ಲೆಯ ಗೊರೂರು ಮೀನುಮರಿ ಪಾಲನಾ ಕೇಂದ್ರವನ್ನು ಉನ್ನತೀಕರಣಗೊಳಿಸಲು ಕ್ರಮವಹಿಸ ಲಾಗುತ್ತಿದೆ. ಯಗಚಿ ಜಲಾಶಯದ ಪಾತ್ರದಲ್ಲಿ ಒಂದು ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪನೆಗಾಗಿ ಕಾವೇರಿ ನೀರಾವರಿ ನಿಗಮ (ನಿ), ಯಗಚಿ ಯೋಜನಾ ವಿಭಾಗಕ್ಕೆ ಖಾಲಿ ಇರುವ ಜಾಗ ನೀಡುವಂತೆ ಈಗಾಗಲೇ ಪತ್ರ ಬರೆಯಲಾಗಿದೆ. ಹಾಗೂ ಅನುಸರಣಾ ಕ್ರಮ ವಹಿಸಲಾಗುತ್ತಿದೆ.
ಉ)	ಉತ್ಪಾದನಾ ಘಟಕ / ಕೇಂದ್ರವನ್ನು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಗಚಿ ಜಲಾಶಯ ಅಚ್ಚುಕಟ್ಟು ಪ್ರದೇಶದಲ್ಲಿ ಲಭ್ಯವಿರುವ ನಿವೇಶನದಲ್ಲಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಪ್ರಸಕ್ತ ವರ್ಷದಲ್ಲಿ ಮೀನುಮರಿ ಉತ್ಪಾದನಾ ಘಟಕವನ್ನು ಪ್ರಾರಂಭಿಸಲಾಗುವುದು (ವಿವರ ನೀಡುವುದು);	ಯಗಚಿ ಜಲಾಶಯ ಮುಂಭಾಗ ಲಭ್ಯವಿರುವ, ಚಿಕ್ಕಬ್ಯಾಡಿಗೆರೆ ಗ್ರಾಮಕ್ಕೆ ಸೇರಿದ ಸರ್ವೇ ನಂ. 2, 3, 4, 62, 63, 56, 57, 58 ರಲ್ಲಿ ಲಭ್ಯವಿರುವ 20 ಎಕರೆ ಖಾಲಿ ಜಾಗ ಇಲಾಖೆಗೆ ಹಸ್ತಾಂತರಿಸುವಂತೆ, ಕಾರ್ಯಪಾಲಕ ಅಭಿಯಂತರರು ಯಗಚಿ ಯೋಜನಾ ವಿಭಾಗ, ಬೇಲೂರು ರವರಿಗೆ ಪತ್ರ ಸಂಖ್ಯೆ:ಎಸ್.ಟಿ.ಆರ್(1)/2019-20, ದಿನಾಂಕ: 27/12/2019 ರಂತೆ ಪತ್ರ ವ್ಯವಹಾರ ಮಾಡಲಾಗಿದೆ. ಸದರಿ ಜಾಗವನ್ನು ಯಗಚಿ ಯೋಜನಾ ವಿಭಾಗದಿಂದ ಪಡೆಯಲು ಅನುಸರಣಾ ಕ್ರಮ ವಹಿಸಲಾಗುತ್ತಿದೆ.
ಊ)	ಬೇಲೂರು ಯಗಚಿ ಜಲಾಶಯ ಮುಂಭಾಗದಲ್ಲಿ ಲಭ್ಯವಿರುವ, ಚಿಕ್ಕಬ್ಯಾಡಿಗೆರೆ ಗ್ರಾಮಕ್ಕೆ ಸೇರಿದ ಸರ್ವೇ ನಂ 2, 3, 4, 62, 63, 56, 57, 58 ಗಳಲ್ಲಿ ಲಭ್ಯವಿರುವ 20-00 ಎಕರೆ ಮುಳುಗಡೆ ಸರ್ಕಾರಿ ಜಮೀನನ್ನು ಮೀನುಗಾರಿಕೆ ಇಲಾಖೆಗೆ ನೀಡಿದಲ್ಲಿ,	ಕಾರ್ಯಪಾಲಕ ಅಭಿಯಂತರರು ಯಗಚಿ ಯೋಜನಾ ವಿಭಾಗ, ಬೇಲೂರು ರವರು ಸದರಿ ಸ್ಥಳವನ್ನು ಮೀನುಗಾರಿಕೆ ಇಲಾಖೆಗೆ ಹಸ್ತಾಂತರಿಸಿದ ನಂತರದಲ್ಲಿ ವಿವಿಧ ಯೋಜನೆಗಳಡಿ ಅನುದಾನವನ್ನು ಒದಗಿಸಿ ಮೀನುಮರಿ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

	ಇಲಾಖೆಯಿಂದ ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪಿಸಿ ಜಿಲ್ಲೆಯಲ್ಲಿ ಸ್ಥಳೀಯವಾಗಿ ಮೀನುಮರಿ ಲಭ್ಯವಾಗು ವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;	
ಋ)	ಈ ಸಂಬಂಧದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ, ಸಲ್ಲಿಸಿದಲ್ಲಿ, ಪ್ರಸ್ತಾವನೆ ಯಾವ ಹಂತದಲ್ಲಿದೆ (ಮಾಹಿತಿ ನೀಡುವುದು)?	ಸದರಿ ಸ್ಥಳವನ್ನು ಇಲಾಖೆಗೆ ಪಡೆಯಲು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರುರವರಿಗೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗಿದೆ.

ಸಂಖ್ಯೆ: ಪಸಂಮೀ ಇ-88 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 20 ಎಲ್‌ಜಿಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21.03.2020

23/3

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬೆಂಗಳೂರು.

40

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 792ಕ್ಕೆ ಉತ್ತರಿಸುವ ಬಗ್ಗೆ

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 792ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,
2/3/20
(ಎಂ.ಇ.ಚನ್ನಬಸವರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-3)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	::	792
ಸದಸ್ಯರ ಹೆಸರು	::	ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
ಉತ್ತರಿಸುವ ದಿನಾಂಕ:	::	23.03.2020
ಉತ್ತರಿಸುವ ಸಚಿವರು	::	ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹೊಸದುರ್ಗ ತಾಲ್ಲೂಕು, ಗೊರವಿನಕಲ್ಲು ಗ್ರಾಮದ ಸರ್ವೆ ನಂ.86ರಲ್ಲಿ ಎಷ್ಟು ಜನರಿಗೆ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ; (ಮಂಜೂರಾತಿಯಾದವರ ವಿವರ ನೀಡುವುದು)	ಹೊಸದುರ್ಗ ತಾಲ್ಲೂಕು, ಗೊರವಿನಕಲ್ಲು ಗ್ರಾಮದ ರಿಸನಂ.86ರಲ್ಲಿ ಜಮೀನು ಮಂಜೂರು ಮಾಡಲಾಗಿರುವ ಮೂಲ ಕಡತವು ಕಣ್ಮರೆಯಾಗಿರುತ್ತದೆ. ಸದರಿ ಕಡತವನ್ನು ಮರುಸೃಷ್ಟಿ ಮಾಡಲು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 110 ಎಲ್‌ಜಿಪಿ 2008 ದಿನಾಂಕ: 03.12.2008ರನ್ವಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
ಆ)	ಈ ಗ್ರಾಮದ ಸರ್ವೆ ನಂ.86ರಲ್ಲಿ ಎಷ್ಟು ಸಬ್ ನಂಬರ್‌ಗಳಾಗಿವೆ; ಸಬ್ ನಂಬರ್‌ಗಳು ಇವುಗಳ ಮಾಲೀಕರ ಹೆಸರಿಗೆ ಯಾವ ಯಾವ ವರ್ಷಗಳಲ್ಲಿ ಮಂಜೂರಾತಿಯಾಗಿದೆ; (ವಿವರ ನೀಡುವುದು)	ಗ್ರಾಮದ ಸರ್ವೆ ನಂ.86ರಲ್ಲಿ ಸಬ್ ನಂಬರ್‌ಗಳಾಗಿರುವುದಿಲ್ಲ. ದರಖಾಸ್ತು ಪೋಡಿ ದುರಸ್ತಿಯಂತೆ ಅನುಬಂಧದಲ್ಲಿ ತಿಳಿಸಿರುವಂತೆ ಹೊಸ ಸರ್ವೆ ನಂ. ಖರ್ದಾದಾರರ ಹೆಸರು ನಮೂದಾಗಿರುತ್ತದೆ.
ಇ)	ಹೊಸದುರ್ಗ ತಾಲ್ಲೂಕು, ಗೂಳಿಹಟ್ಟಿ ಸರ್ವೆ ನಂ.26ರಲ್ಲಿ 452 ಎಕರೆ ಜಮೀನಿನಲ್ಲಿ ರೈತರ ಕೃಷಿ ಜಮೀನಿದ್ದು ಈ ಜಮೀನಿಗೆ ಯಾವಾಗ ಸಾಗುವಳಿ ಚೀಟಿ ನೀಡಲಾಗುವುದು; ಈ ಜಮೀನಿಗೆ ಕಂದಾಯ ಇಲಾಖೆಯಿಂದ ಯಾವಾಗ ದಾಖಲೆ ನೀಡಲಾಗುವುದು? (ವಿವರ ನೀಡುವುದು)	ಗೂಳಿಹಟ್ಟಿ ಗ್ರಾಮದ ಸ.ನಂ.26ರಲ್ಲಿ ಸಂ: ಯುಎಲ್‌ಎನ್‌ಡಿ:ಸಿಆರ್-130/91-92 ದಿನಾಂಕ: 17.01.1998ರಂತೆ 18 ಜನರಿಗೆ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯಲ್ಲಿ ಸಕ್ರಮಗೊಳಿಸಿದೆ. ಈ ಪೈಕಿ 8 ಜನರಿಗೆ 18-05 ಎಕರೆ ವಿಸ್ತೀರ್ಣ ಪಹಣಿ ಇಂಡೀಕರಣ ಆಗಿರುತ್ತದೆ. ಉಳಿದ 10 ಜನರಿಗೆ ಸಕ್ರಮಗೊಳಿಸಲು ಸದರಿ ಜಮೀನು ಅರಣ್ಯ ಇಲಾಖೆಗೆ ವರ್ಗಾವಣೆ ಆಗಿರುವುದರಿಂದ ಪಹಣಿ ಇಂಡೀಕರಣ ಮಾಡಲು ರಹಾ ಇರುವುದಿಲ್ಲ. ಸದರಿ ಸಕ್ರಮಾತಿ ಬಗ್ಗೆ ಸದರಿ ಜಮೀನು ಅರಣ್ಯ ಇಲಾಖೆಗೆ ಸೇರಿರುವುದನ್ನು ಕಂದಾಯ ಇಲಾಖೆಗೆ ವರ್ಗಾಯಿಸಲು ಅರಣ್ಯ ಮತ್ತು ಕಂದಾಯ ಇಲಾಖೆಯಿಂದ ಜಂಟಿ ಪರಿಶೀಲನೆ ನಡೆಸಿ, 80-25 ಹೆಕ್ಟೇರ್ ವಿಸ್ತೀರ್ಣವನ್ನು ಅರಣ್ಯ ಇಲಾಖೆಗೆ ಉಳಿಸಿ, ಬಾಕಿ ಉಳಿದ 100-31 ಹೆಕ್ಟೇರ್ ಜಮೀನನ್ನು ಕಂದಾಯ ಇಲಾಖೆಗೆ ವರ್ಗಾಯಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಆರ್‌ಡಿ 20 ಎಲ್‌ಜಿಸಿ 2020

(ಆರ್.ಅಶೋಕ್)
ಕಂದಾಯ ಸಚಿವರು

ಅನುಬಂಧ

ಚಿತ್ರದುರ್ಗ ಜಿಲ್ಲೆ, ಗೊರವಿನಕಲ್ಲು ಗ್ರಾಮದ ರಿ.ಸ.ನಂ.೩೯ರಲ್ಲಿ ದರಖಾಸ್ತು ಪೋಡಿ ದುರಸ್ಥಿಯಂತೆ

ಕರ್ದಾದಾರರ ಹೆಸರು ವಿವರ.

ಹೊಸ ಸ.ನಂ.	ದುರಸ್ಥಿಯಾದ ವರ್ಷ	ಕರ್ದಾದಾರರ ಹೆಸರು
123	1979	ಶ್ರೀಮತಿ ಲಕ್ಕಮ್ಮ ಕೋಂ ರಾಮಣ್ಣ
124	1979	ಶ್ರೀ ಸಿ.ಪ್ರಕಾಶ್ ಬಿನ್ ಚಂದ್ರಶೇಖರಯ್ಯ
125	1979	ಶ್ರೀ ಕೆಂಚಪ್ಪ ಬಿನ್ ಕರಿಯಪ್ಪ
159	2004	ಶ್ರೀ ಎ.ಆರ್.ಸತ್ಯನಾರಾಯಣ ಬಿನ್ ರಂಗಪ್ಪ
160	2004	ಶ್ರೀ ಕೆ.ದಾಸ್ ಬಿನ್ ಡೇವಿಡ್
161	2004	ಶ್ರೀ ಹೊನ್ನೂರಯ್ಯ ಬಿನ್ ಹೋನ್ನೂರಯ್ಯ
162	2004	ಶ್ರೀ ತಾಜುದ್ದೀನ್ ಬಿನ್ ಮೋದೀನ್ ಸಾಬ್
163	2004	ಶ್ರೀ ಸೈಯದ್‌ನನ್ನೆಸಾಬ್ ಬಿನ್ ಇಸೂಸಾಬ್
164	2004	ಶ್ರೀ ಬಾಷಸಾಬ್ ಬಿನ್ ಅಬ್ದುಲ್ ಜಲೀಲ್‌ಸಾಬ್
165	2004	ಶ್ರೀ ಅನ್ವರ್ ಖಾನ್ ಬಿನ್ ರಹಮಾನ್ ಖಾನ್
166	2004	ಶ್ರೀ ಹನುಮಂತಪ್ಪ ಬಿನ್ ಮಾನಪ್ಪ
167	2004	ಶ್ರೀ ರಾಮಣ್ಣ ಬಿನ್ ನರಸಿಂಹಪ್ಪ
168	2004	ಶ್ರೀ ಎ.ಕೆ.ಪರುಶುರಾಮಪ್ಪ ಬಿನ್ ಯಲ್ಲಮ್ಮ
169	2004	ಶ್ರೀಮತಿ ಚಂದ್ರಮ್ಮ ತಾಯಿ ಸೀತಮ್ಮ
170	2006-07	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ
171	2006-07	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ
172	2006-07	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ
173	2006-07	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ
174	2006-07	ಕರ್ದಾಧಾರರ ಮಾಹಿತಿ ಲಭ್ಯವಿರುವುದಿಲ್ಲ
176	2009-10	ನರಸಿಂಹಯ್ಯ ಬಿನ್ ದಗಡಿ ಹುಚ್ಚಣ್ಣ
177	2008-09	ಅಬ್ದುಲ್ ಬಶೀರ್‌ಸಾಬ್
178	2008-09	ದೊಡ್ಡಮಲ್ಲಪ್ಪ
179	2009-10	ರುದ್ರಪ್ಪ ಬಿನ್ ಈಶ್ವರಪ್ಪ
180	2012	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ
181	2009-10	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ
182	2014	ಕರ್ದಾದಾರರ ಮಾಹಿತಿ ಲಭ್ಯವಿರುವುದಿಲ್ಲ

UNSTARRED Q.No. 2838

ಕರ್ನಾಟಕ ಸರ್ಕಾರ

ಸಂಖ್ಯೆ:E-AGRI-AML/72/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 23-03-2020

177 US
23/3/2020

ಇವರಿಂದ

ಸರ್ಕಾರದ ಕಾರ್ಯದರ್ಶಿ,
ಕೃಷಿ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ) ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ: 2838 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.2838/2020 ದಿನಾಂಕ: 10.03.2020.

******

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ) ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ: 2838 ಕ್ಕೆ ಉತ್ತರದ ಸಾಫ್ಟ್ ಪ್ರತಿಗಳನ್ನು ಇ-ಮೇಲ್ ಐಡಿ: questionsKlc@gmail.com ಗೆ ಕಳುಹಿಸಲಾಗಿದೆ ಹಾಗೂ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

P. S. 23/3
(ಪಿ. ಸತ್ಯಭಾಮ)
ಸರ್ಕಾರದ ಅಧೀನಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2838
2.	ಸದಸ್ಯರ ಹೆಸರು	:	ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
3.	ಉತ್ತರಿಸುವ ದಿನಾಂಕ	:	23.03.2020
4.	ಉತ್ತರಿಸುವ ಸಚಿವರು	:	ಕೃಷಿ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ರಾಜ್ಯದಲ್ಲಿ ಸಮಗ್ರ ಕೃಷಿ ಅಭಿವೃದ್ಧಿಗಾಗಿ ಸರ್ಕಾರದ ಪ್ರಗತಿಪರ ಯೋಜನೆಗಳಾವುವು;</td><td>ರಾಜ್ಯದಲ್ಲಿ ಸಮಗ್ರ ಕೃಷಿ ಅಭಿವೃದ್ಧಿಗಾಗಿ ಸರ್ಕಾರದ ಪ್ರಗತಿಪರ ಯೋಜನೆಗಳ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.</td></tr>
<tr><td>ಆ) ಕಳೆದ ಮೂರು ವರ್ಷಗಳ ಆಯವ್ಯಯಗಳಲ್ಲಿ ಕೃಷಿ ಇಲಾಖೆಗೆ ಒದಗಿಸಿರುವ ಅನುದಾನದ ಮೊತ್ತ ಎಷ್ಟು; (ವರ್ಷವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳ ಆಯವ್ಯಯಗಳಲ್ಲಿ ಕೃಷಿ ಇಲಾಖೆಗೆ ಒದಗಿಸಿರುವ ಅನುದಾನದ ಮೊತ್ತದ ವಿವರ ಈ ಕೆಳಕಂಡಂತಿದೆ.
(ರೂ. ಲಕ್ಷಗಳಲ್ಲಿ)
<table><tr><th>ವರ್ಷ</th><th>ಕೃಷಿ ಇಲಾಖೆ</th><th>ಜಲಾನಯನ ಅಭಿವೃದ್ಧಿ ಇಲಾಖೆ</th></tr><tr><td>2016-17</td><td>355376.47</td><td>41207.00</td></tr><tr><td>2017-18</td><td>396337.53</td><td>53465.33</td></tr><tr><td>2018-19</td><td>389448.80</td><td>46239.33</td></tr></table></td></tr>
<tr><td>ಇ) ಇಸ್ರೇಲ್ ಮಾದರಿಯ ನೀರಾವರಿ ವ್ಯವಸ್ಥೆ ಹಾಗೂ ಡ್ರೋನ್ ಬಳಕೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಇಲಾಖೆ ಕೈಗೊಂಡ ಕ್ರಮಗಳಾವುವು;(ವಿವರ ನೀಡುವುದು)</td><td>ರಾಜ್ಯದಲ್ಲಿನ ಕೃಷಿ ಮತ್ತು ತೋಟಗಾರಿಕೆ ವಲಯದಲ್ಲಿ ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಪೂರಕವಾದ ಸಾಧಕ-ಭಾದಕಗಳ ಪರಿಶೀಲಿಸಿ ರೈತರಿಗೆ ಉಪಯುಕ್ತ ಸಲಹೆ ಮತ್ತು ಮಾರ್ಗದರ್ಶನಗಳ ಕಾರ್ಯಸೂಚಿಗಳನ್ನು ಅಂತಿಮಪಡಿಸಲು ಸಮಿತಿ ವರದಿಯ ಆಧಾರದ ಮೇಲೆ ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಮಿಷನ್ 2019ರ ಫೆಬ್ರವರಿಯಲ್ಲಿ ವಿಶೇಷ ಸಾಂಸ್ಥಿಕ ಕೃಷಿ ಮಿಷನ್ ಸ್ಥಾಪಿಸಲಾಗಿದೆ. ಇಸ್ರೇಲ್ ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಯನ್ನು ಅನುಷ್ಠಾನಗೊಳಿಸಲು ಬಹಳಷ್ಟು ಪೂರ್ವ ಸಿದ್ಧತೆ ಅವಶ್ಯಕವಿದ್ದು, ಈ ನಿಟ್ಟಿನಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಮತ್ತು ಸಂಬಂಧಪಟ್ಟ ಇಲಾಖೆ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯನ್ನು ರಚಿಸಲಾಗಿದೆ.

ಈ ಯೋಜನೆ ಅನುಷ್ಠಾನ ಕಾರ್ಯದಲ್ಲಿ ಸಾಮರ್ಥ್ಯಾಭಿವೃದ್ಧಿ ಮತ್ತು ಜ್ಞಾನ ವರ್ಗಾವಣೆ ಬಹುಮುಖ್ಯವಾದ ಅಂಶವಾಗಿದೆ. ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದ ಸೇವೆಯನ್ನು ಸದರಿ ಯೋಜನೆ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ 4 ಕೃಷಿ ಮತ್ತು 1 ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ಪಾತ್ರ ಅತ್ಯಗತ್ಯವಾಗಿದೆ.

5 ವಿಶ್ವವಿದ್ಯಾನಿಲಯಗಳ ಒಳಗೊಂಡ ಸದಸ್ಯರ ಉಪಸಮಿತಿಗಳನ್ನು ರಚಿಸಲಾಗಿದ್ದು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಪ್ರಾತ್ಯಕ್ಷಿಕೆ ತಾಕುಗಳ ಸ್ಥಾಪನೆ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ರೈತರಿಗೆ ಅರಿವು ಮತ್ತು ತೋಟಗಾರಿಕಾ ಪದ್ಧತಿಗಳ ಕೈಪಿಡಿ ಸಿದ್ಧಪಡಿಸುವುದು, ರಾಯಚೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಜಾಗೃತಿ/ಅರಿವು ಮೂಡಿಸಲು ವಿಷಯ ಸೃಜನೆ ಕುರಿತು,</td></tr>
</table>

	ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಕೃಷಿ ಮತ್ತು ತೋಟಗಾರಿಕೆ ಪದವೀಧರರಿಗೆ ಒಂದು ವರ್ಷದ ಡಿಪ್ಲೋಮೊ ವಿಷಯ ಸಿದ್ಧಪಡಿಸುವುದು ಮತ್ತು ಬಾಗಲಕೋಟೆ, ತೋಟಗಾರಿಕೆ ವಿಶ್ವವಿದ್ಯಾನಿಲಯಕ್ಕೆ ಉತ್ತಮ ಕೃಷಿ ಮತ್ತು ತೋಟಗಾರಿಕೆ ಪದ್ಧತಿಗಳ ಮಾಹಿತಿ ಕ್ರೋಢೀಕರಿಸುವ ಬಗ್ಗೆ ವರದಿ ನೀಡಲು ಸೂಚಿಸಲಾಗಿದ್ದು, ಈಗಾಗಲೇ ವಿಶ್ವವಿದ್ಯಾನಿಲಯಗಳು ಕರಡು ವರದಿಗಳನ್ನು ಸಲ್ಲಿಸಲಾಗಿದ್ದು, ಸದರಿ ವರದಿಗಳನ್ನು ಪರಿಶೀಲಿಸಿ ಮುಂದಿನ ಕ್ರಮಕ್ಕೆ ಆದ್ಯತೆ ನೀಡಲಾಗುವುದು. ಇಸ್ರೇಲ್ ತಂತ್ರಜ್ಞಾನ ಆಧಾರಿತ ಸಮಗ್ರ ಕೃಷಿ ಪದ್ಧತಿಗಳನ್ನು ರೈತರು ಅನುಸರಿಸಬೇಕಾದ ಉಪಯುಕ್ತವಾಗುವ ಮಾದರಿಗಳ ಬಗ್ಗೆ ಇತ್ತೀಚಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಕೃಷಿ ಮೇಳ 2019ರಲ್ಲಿ ವಿಶೇಷವಾದ ಪ್ರಾತ್ಯಕ್ಷಿಕೆ ತಾಕುಗಳನ್ನು ಸ್ಥಾಪಿಸಿ ರೈತರಿಗೆ ಅರಿವು ಮೂಡಿಸುವ ಕಾರ್ಯ ನಡೆಸಲಾಗಿದೆ. ಈ ಮೇಳದಲ್ಲಿ ಲಕ್ಷಾಂತರ ರೈತರು ಭಾಗವಹಿಸಿ ನೂತನ ಕೃಷಿ ಪದ್ಧತಿಗಳ ಬಗ್ಗೆ ಶಿಕ್ಷಣ ಪಡೆದಿರುತ್ತಾರೆ. ಪ್ರಸ್ತುತ ಬಜೆಟ್ 2020–21ರ ಕಂಡಿಕೆ 35ರಂತೆ, ನೀರು ಮತ್ತು ಗೊಬ್ಬರಗಳ ಬಳಕೆಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಸಾಮರ್ಥ್ಯಾಭಿವೃದ್ಧಿ ಮತ್ತು ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ ನಿಟ್ಟಿನಲ್ಲಿ ರಾಜ್ಯಾದ್ಯಂತ 40 ಪ್ರಾತ್ಯಕ್ಷಿಕೆ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿ, ಉತ್ತಮ ಕೃಷಿ ಪದ್ಧತಿಗಳು, ನೂತನ ತಂತ್ರಜ್ಞಾನಗಳ ಬಗ್ಗೆ ಕೃಷಿ ಕಲಿಕೆ ಪ್ರಾತ್ಯಕ್ಷಿಕೆ ನೀಡಲಾಗುವುದು.
ಈ) ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆ ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳೇನು ?	ರಾಜ್ಯದಲ್ಲಿ ಮೇಲ್ಮೈ ಜಲ ಮೂಲಗಳಿಂದ ನೀರಾವರಿಗೆ ಒಳಪಡಿಸಬಹುದಾದ 10.00 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸಣ್ಣ ನೀರಾವರಿ ಯೋಜನೆಗಳ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ ಎಂದು ಅಂದಾಜಿಸಲಾಗಿದೆ. ಸಣ್ಣ ನೀರಾವರಿ ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಿ ತ್ವರಿತವಾಗಿ ಕೃಷಿಗೆ ನೀರು ಒದಗಿಸಬಹುದಾದ್ದರಿಂದ ಇದು ಪ್ರಾಮುಖ್ಯತೆ ಹೊಂದಿರುತ್ತದೆ. **ಹೊಸಕೆರೆಗಳ ನಿರ್ಮಾಣ, ಇಂಗು ಕೆರೆಗಳ ನಿರ್ಮಾಣ:** ನದಿ ಮತ್ತು ತೊರೆಗಳಿಗೆ ಅಡ್ಡಲಾಗಿ ಹೊಸಕೆರೆಗಳನ್ನು ನಿರ್ಮಿಸಿ, ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿ, ಈ ನೀರನ್ನು ಬೆಳೆಗಳಿಗೆ ಮಳೆ ಇಲ್ಲದ ಅಥವಾ ಮಳೆ ಅಭಾವವಿರುವ ಕಾಲದಲ್ಲಿ ಬಳಸಲಾಗುವುದು. ಶೇಖರಿಸಿದ ನೀರನ್ನು ಗುರುತ್ವಾಕರ್ಷಣೆಯ ಹರಿವಿನೊಂದಿಗೆ ಸಮರ್ಪಕವಾಗಿ ಜಮೀನುಗಳಿಗೆ ವಿತರಣೆ ಮಾಡಲಾಗುತ್ತದೆ. ಅಂತರ್ಜಲ ಅಭಿವೃದ್ಧಿ ಪಡಿಸುವ ಇಂಗು ಕೆರೆಗಳ ನಿರ್ಮಾಣವನ್ನು ಸಹಾ ಕೈಗೊಳ್ಳಲಾಗುತ್ತಿದ್ದು, ಇದರಿಂದ ಸುತ್ತಮುತ್ತಲಿನ ತೆರೆದ ಬಾವಿಗಳಲ್ಲಿ ಮತ್ತು ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟವು ಏರಿಕೆಯಾಗಿ ಪರೋಕ್ಷವಾಗಿ ನೀರಾವರಿಗೆ ಉಪಯೋಗವಾಗುತ್ತಿದೆ. **ಬಾಂದಾರಗಳು, ಬ್ಯಾರೇಜ್ ಮತ್ತು ಬ್ಯಾರೇಜ್ ಸಹಿತ ಸೇತುವೆಗಳು, ಅಣೆಕಟ್ಟು ಮತ್ತು ಪಿಕಪ್‌ಗಳು, ಕಿಂಡಿ ಅಣೆಕಟ್ಟುಗಳು, ಉಪ್ಪು ನೀರು ತಡೆ ಅಣೆಕಟ್ಟುಗಳು:** ನದಿ, ಹಳ್ಳಗಳಿಗೆ ಅಡ್ಡಲಾಗಿ ಬಂದಾರಗಳನ್ನು, ಸೇತುವೆ ಸಹಿತ ಬಂದಾರಗಳನ್ನು, ಕಿಂಡಿ ಅಣೆಕಟ್ಟುಗಳನ್ನು, ಉಪ್ಪು ನೀರು ತಡೆಗೋಡೆ ಅಣೆಕಟ್ಟುಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವ ಕಾಮಗಾರಿಗಳನ್ನು ಇಲಾಖೆಯು ಕೈಗೊಳ್ಳುತ್ತಿದೆ. ಹೀಗೆ ಸಂಗ್ರಹಿಸಲಾಗುವ ನೀರನ್ನು ಸ್ವಂತ ಪಂಪುಗಳಿಂದ ಮೇಲೆತ್ತಿ ಉಪಯೋಗಿಸಲು ರೈತರಿಗೆ ಅನುಮತಿ ನೀಡಲಾಗುತ್ತಿದೆ.

	ಏತ ನೀರಾವರಿ ಯೋಜನೆಗಳು: ನದಿ, ತೊರೆ, ಇತರ ಮೇಲ್ಮೈ ಜಲ ಮೂಲಗಳಿಂದ ನೀರನ್ನು ಎತ್ತರವಾದ ಪ್ರದೇಶಕ್ಕೆ ಪಂಪ್‌ಗಳ ಮೂಲಕ ಮೇಲೆತ್ತಿ, ಅಲ್ಲಿಂದ ಗುರುತ್ವಾಕರ್ಷಣೆಯ ಹರಿವಿನ ಮೂಲಕ ನೀರೊದಗಿಸಲು ಏತ ನೀರಾವರಿ ಯೋಜನೆಗಳನ್ನು ಸಹಾ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. **ಸರಣಿ ಚೆಕ್ ಡ್ಯಾಂಗಳ ನಿರ್ಮಾಣ:** ರಾಜ್ಯದಲ್ಲಿ ಅಂತರ್ಜಲ ಕುಸಿದಿರುವ ಜಿಲ್ಲೆಗಳಲ್ಲಿ ನೈಸರ್ಗಿಕ ನದಿ / ಹಳ್ಳಗಳಿಗೆ ಅಡ್ಡಲಾಗಿ ಸರಣಿಯಲ್ಲಿ ಪಿಕಪ್ / ಚೆಕ್ ಡ್ಯಾಂಗಳನ್ನು ನಿರ್ಮಿಸುವ ಕಾಮಗಾರಿಗಳನ್ನು ನಿರ್ಮಿಸಲಾಗುತ್ತಿದೆ.

ಸಂಖ್ಯೆ: ಕೃಇ/ಕೃಯೋಕಾ/72/2020

(ಬಿ.ಸಿ. ಪಾಟೀಲ್) 23/3/20

ಕೃಷಿ ಸಚಿವರು

ಚು.ಗುರುತಿಲ್ಲದ ಪ್ರಶ್ನೆ ಸಂಖ್ಯೆ 2838

ಅನುಬಂಧ-1

ರಾಜ್ಯದಲ್ಲಿ ಸಮಗ್ರ ಕೃಷಿ ಅಭಿವೃದ್ಧಿಗಾಗಿ ಸರ್ಕಾರದ ಪ್ರಗತಿಪರ ಯೋಜನೆಗಳ / **ಕಾರ್ಯಕ್ರಮಗಳ** ವಿವರ

ಕ್ರ.ಸಂಖ್ಯೆ	ಯೋಜನೆಗಳು/ **ಕಾರ್ಯಕ್ರಮಗಳು**
1.	ಮಣ್ಣು ಆರೋಗ್ಯ ಕಾರ್ಯಕ್ರಮ
2.	ರಾಷ್ಟ್ರೀಯ ಆಹಾರ ಸುರಕ್ಷತಾ ಅಭಿಯಾನ
3.	ಬಿತ್ತನೆ ಬೀಜಗಳ ಪೂರೈಕೆ
4.	ಸಸ್ಯ ಸಂರಕ್ಷಣೆ
5.	ಮಣ್ಣಿನ ಸತ್ವ ಹೆಚ್ಚಿಸುವಿಕೆ
6.	ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣೆ
7.	ಕೃಷಿ ಯಂತ್ರಧಾರೆ
8.	ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ
9.	ಕರಾವಳಿ ಪ್ಯಾಕೇಜ್
10.	ಸಾವಯವ ಕೃಷಿ ಮತ್ತು ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ
11.	ರೈತ ಸಿರಿ
12.	ಕೃಷಿ ಭಾಗ್ಯ ಯೋಜನೆ
13.	ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ
14.	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ
15.	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
16.	ಕೃಷಿ ವಿಸ್ತರಣೆ ಉಪ ಅಭಿಯಾನ
17.	ಕೃಷಿ ಯಾಂತ್ರೀಕರಣ ಉಪ ಅಭಿಯಾನ
18.	ಬಿತ್ತನೆ ಬೀಜ ಉಪ ಅಭಿಯಾನ
19.	ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ
20.	ಪರಂಪರಾಗತ ಕೃಷಿ ವಿಕಾಸ ಯೋಜನೆ
21.	ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ
22.	ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ್ ಪ್ರಶಸ್ತಿ
23.	ಬೆಳೆ ಸಾಲಕ್ಕೆ ಸಹಾಯಧನ
24.	ಕೃಷಿ ಬೆಲೆ ಆಯೋಗ
25.	ಆಹಾರ ಸಂಸ್ಕರಣೆ ಮತ್ತು ಬಂಡವಾಳ ಹೂಡಿಕೆ
26.	ಕೃಷಿ ಅಭಿಯಾನ
27.	ಕೃಷಿ ಮೇಳ ಮತ್ತು ವಸ್ತುಪ್ರದರ್ಶನ
28.	ಕೃಷಿ ವಾರ್ತಾ ಘಟಕ
29.	ತರಬೇತಿ ಕಾರ್ಯಕ್ರಮಗಳು

30.	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ–ಜಲಾನಯನ ಅಭಿವೃದ್ಧಿ ಘಟಕ
31.	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ–ಇತರೆ ಉಪಚಾರಗಳು
32.	ಕರ್ನಾಟಕಜಲಾನಯನಅಭಿವೃದ್ಧಿಯೋಜನೆ–II (ಸುಜಲ–III)
33.	ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ – ಮಳೆಯಾಶ್ರಿತ ಪ್ರದೇಶಾಭಿವೃದ್ಧಿ

ಕರ್ನಾಟಕ ಸರಕಾರ

ಸಂಖ್ಯೆ: ಕಂಇ 46 ಟಿಆರ್ಎಂ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:23.03.2020.

69
23/3/20

ಇವರಿಂದ,

ಸರ್ಕಾರದ ಕಾರ್ಯದರ್ಶಿ
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನಸೌಧ ,
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಹೆಚ್.ಕೆ ಕುಮಾರಸ್ವಾಮಿ (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂ: 2820 ಕ್ಕೆ ಉತ್ತರ ಒದಗಿಸುವ ಬಗ್ಗೆ.

* * * * *

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಹೆಚ್.ಕೆ ಕುಮಾರಸ್ವಾಮಿ (ಸಕಲೇಶಪುರ)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂ: 2820 ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ. ಅನುಬಂಧದ ಪುಟಗಳು 25 ಪ್ರತಿಗಳಿಗಿಂತ ಹೆಚ್ಚಾಗಿರುವುದರಿಂದ ಉತ್ತರದೊಂದಿಗೆ 50 ಪ್ರತಿಗಳನ್ನು ಲಗತ್ತಿಸಿ ಕಳುಹಿಸುತ್ತಾ, ಉಳಿದಂತೆ ಸಿ.ಡಿ ರೂಪದಲ್ಲಿ ಒದಗಿಸಲಾಗುವುದು.

ತಮ್ಮ ನಂಬುಗೆಯ,

(ಸುದರ್ಶನ್ ಹೆಚ್.ಎಂ)
ಶಾಖಾಧಿಕಾರಿ
ಕಂದಾಯ ಇಲಾಖೆ (ಭೂ ಕಂದಾಯ)

<u>ಕರ್ನಾಟಕ ವಿಧಾನಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2820

ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಉತ್ತರಿಸುವ ದಿನಾಂಕ : 23.3.2020

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿ, ಕಟ್ಟಾಯ ಗ್ರಾಮದ ಸರ್ವೆ ನಂಬರ್ 56ರಲ್ಲಿ 112.03 ಎಕರೆ ವಿಸ್ತೀರ್ಣ ಜಮೀನಿನಲ್ಲಿ ಸುಮಾರು 85 ಜನ ಬಗರ್ ಹುಕುಂನಲ್ಲಿ ಸಾಗುವಳಿ ಮಾಡುತ್ತಿದ್ದು, ಸುಮಾರು 50 ವರ್ಷಗಳಿಂದಲೂ ಕಂದಾಯ ಇಲಾಖೆಯ ಆರ್.ಟಿ.ಸಿ ಯಲ್ಲಿ ಎಲ್ಲಾ ವರ್ಗಗಳ ಸಾಗುವಳಿದಾರರ ಹೆಸರುಗಳು ದಾಖಲಾಗಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿ, ಕಟ್ಟಾಯ ಗ್ರಾಮದ ಸರ್ವೆ ನಂ. 56ರಲ್ಲಿ 112.03 ಎಕರೆ / ಗುಂಟೆ ಜಮೀನು ಜುಮ್ಲಾ ವಿಸ್ತೀರ್ಣ ಪೈಕಿ, 1990-91ರಲ್ಲಿ 18 ಜನರಿಗೆ, 1991-92ರಲ್ಲಿ 08 ಜನರಿಗೆ, 1995-96ರಲ್ಲಿ ಒಬ್ಬರಿಗೆ, 1999-2000ರಲ್ಲಿ ಇಬ್ಬರಿಗೆ, 2002-03ರಲ್ಲಿ 26 ಜನರಿಗೆ, ಒಟ್ಟು 55 ಜನರಿಗೆ ಬಗರ್ ಹುಕುಂ ಸಾಗುವಳಿಯಡಿ 41-06ಎಕರೆ/ಗುಂಟೆ ಜಮೀನನ್ನು ಸಕ್ರಮೀಕರಣಗೊಳಿಸಿ ಪಹಣಿ ದಾಖಲಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು ಇರುತ್ತಾರೆ. **(ಪಹಣಿ ಪ್ರತಿ ಅನುಬಂಧ-01ರಲ್ಲಿ ನೀಡಿದೆ)**
ಆ	ಹಾಗಿದ್ದಲ್ಲಿ, ಎಲ್ಲಾ 85 ಜನರಿಗೆ ಹಾಸನ ತಾಲ್ಲೂಕಿನ ಬಗರ್ ಹುಕುಂ ಸಮಿತಿಯಿಂದ ಖಾಯಂ ಮಾಡಿ ಅವರ ಹೆಸರುಗಳನ್ನು ಆರ್.ಟಿ.ಸಿ.ನಲ್ಲಿ ದಾಖಲಾಗಿ, ಕಂದಾಯ ಪಾವತಿ ಮಾಡಿ ಅವರ ಹೆಸರಿನಲ್ಲಿ ಖಾತೆ/ಪಹಣಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	55 ಜನರಿಗೆ ಬಗರ್ ಹುಕುಂ ಸಾಗುವಳಿಯಡಿ ಜಮೀನು ಮಂಜೂರು ಮಾಡಿದಂತೆ ಖಾತೆ/ಪಹಣಿ ದಾಖಲಾಗಿದೆ. **(ಪಹಣಿ ಮತ್ತು ಮ್ಯುಟೇಷನ್ ಅನುಬಂಧ-02 ರಲ್ಲಿ ನೀಡಿದೆ)**
ಇ)	ಬಂದಿದ್ದಲ್ಲಿ, ಬಗರ್ ಹುಕುಂ ಸಾಗುವಳಿಯನ್ನು ಖಾಯಂ ಮಾಡಿದ ನಂತರ ಹಲವಾರು ಸಾಗುವಳಿದಾರರು ಈ ಆದೇಶದನ್ವಯ ಪಹಣಿ/ಖಾತೆಯಾದ ನಂತರ ಸಹಕಾರ ಸಂಘ ಮತ್ತು ಇತರೆ ಬ್ಯಾಂಕುಗಳಲ್ಲಿ ಬೆಳೆಸಾಲ ಮತ್ತು ಮತ್ತಿತರ ಸಾಲಗಳನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.

----2

ಈ)	ಹಾಗಿದ್ದಲ್ಲಿ, ಈ ಜಮೀನನ್ನು 1994ನೇ ಸಾಲಿನಲ್ಲಿ ಮೀಸಲು ಅರಣ್ಯವೆಂದು ಘೋಷಣೆ ಮಾಡಿ 2010-11ನೇ ಸಾಲಿನಿಂದ ಇತ್ತೀಚೆಗೆ ಈ ಗ್ರಾಮದ ಆರ್.ಟಿ.ಸಿ. ನಲ್ಲಿ ದಾಖಲು ಮಾಡಿ ಬಗರ್ ಹುಕುಂ ಅಡಿಯಲ್ಲಿ ಬಗರ್ ಹುಕುಂ ಅಡಿಯಲ್ಲಿ ಜಮೀನು ಮಂಜೂರಾಗಿರುವ ರೈತರು ಬೀದಿ ಪಾಲಾಗಿರುವುದರಿಂದ ಈ ಬಗ್ಗೆ ಕೈಗೊಂಡ ಕ್ರಮಗಳೇನು;	ಹಾಸನ ತಾಲ್ಲೂಕು , ಕಟ್ಟಾಯ ಹೋಬಳಿ, ಕಟ್ಟಾಯ ಗ್ರಾಮದ ಸರ್ವೆ ನಂ:56 ರಲ್ಲಿ 112-03 ಎಕರೆ ಸರ್ಕಾರಿ ಗೋಮಾಳದ ಪೈಕಿ 107-03 ಎಕರೆ ಮೀಸಲು ಅರಣ್ಯವೆಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ಎ.ಹೆಚ್.ಎಫ್.ಎಫ್.157, ಎಫ್.ಎ.ಎಫ್.88 ಬೆಂಗಳೂರು ದಿನಾಂಕ:29.07.1994 ರಂತೆ ಘೋಷಣೆಯಾಗಿದ್ದು, ಸದರಿ 107-03 ಎಕರೆ ವಿಸ್ತೀರ್ಣವು ಅರಣ್ಯ ಇಲಾಖೆ ಎಂದು ಎಂ.ಆರ್.ನಂಬರ್-01/2010-11 ರಂತೆ ಪಹಣಿಯಲ್ಲಿ ದಾಖಲಾಗಿದೆ. ಪ್ರಸ್ತಾಪಿತ ಪ್ರದೇಶದಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಯಾವುದೇ ಕ್ರಮ ಜರುಗಿಸಿರುವುದಿಲ್ಲ. **(ಸರ್ಕಾರದ ಅಧಿಸೂಚನೆಯ ಪ್ರತಿ ಹಾಗೂ ಪಹಣಿ ಮತ್ತು ಮ್ಯುಟೇಷನ್ ಪ್ರತಿಗಳನ್ನು ಅನುಬಂಧ-03 ರಲ್ಲಿ ನೀಡಿದೆ)**
ಉ)	ಸದರಿ ಜಮೀನು ಆರ್.ಟಿ.ಸಿಯಲ್ಲಿ ಅರಣ್ಯ ಇಲಾಖೆ ಎಂದು ದಾಖಲಾಗಿರುವುದರಿಂದ ಇಲಾಖೆಯವರು ಜಮೀನಿನಲ್ಲಿ ಟ್ರೆಂಚ್ ಹೊಡೆದು ರೈತರನ್ನು ಒಕ್ಕಲೆಬ್ಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಸನ ತಾಲ್ಲೂಕು, ಸಕಲೇಶಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಟ್ಟಾಯ ಹೋಬಳಿ, ಕಟ್ಟಾಯ ಗ್ರಾಮದ ಸ.ನಂ:56 ರಲ್ಲಿ 107-03 ಎಕರೆ ವಿಸ್ತೀರ್ಣ ಜಮೀನು ಆರ್.ಟಿ.ಸಿ ಯಲ್ಲಿ ಅರಣ್ಯ ಇಲಾಖೆ ಎಂದು 2010-2011 ನೇ ಸಾಲಿನಲ್ಲಿ ದಾಖಲಾಗಿರುವ ಪ್ರದೇಶದಲ್ಲಿ ಇದುವರೆಗೆ ರೈತರನ್ನು ಒಕ್ಕಲೆಬ್ಬಿಸುವ ಕ್ರಮ ಜರುಗಿಸಿರುವುದಿಲ್ಲ.
ಊ)	ಬಂದಿದ್ದಲ್ಲಿ, ಈ ರೀತಿ ತೊಂದರೆಗೊಳಗಾಗಿರುವ ರೈತರಿಗೆ ಅರಣ್ಯ ಮತ್ತು ಪತ್ರಾಗಾರ ಇಲಾಖೆಯಿಂದ ಸರಿಯಾದ ದಾಖಲೆಗಳನ್ನು ನೀಡದೇ ರೈತರಿಗೆ ಕಿರುಕುಳ ನೀಡುತ್ತಿರುವುದರಿಂದ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು;	ಉದ್ಭವಿಸುವುದಿಲ್ಲ.
ಋ)	ಸುಮಾರು 50 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿ, ಜಮೀನು ಮಂಜೂರ ಮಾಡಿಸಿಕೊಂಡಿರುವ 85 ಜನ ಪರಿಶಿಷ್ಟ ಜಾತಿ/ಪಂಗಡದ ಹಾಗೂ ಹಿಂದುಳಿದ ವರ್ಗಗಳ ಸಣ್ಣ ರೈತರುಗಳಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?(ಸಂಪೂರ್ಣ ಮಾಹಿತಿ ನೀಡುವುದು)	ಕಂದಾಯ ಇಲಾಖೆಯಲ್ಲಿ ಇಂತಹ ಯಾವುದೇ ಪ್ರಸ್ತಾವನೆಗಳು ಪರಿಶೀಲನೆಯಲ್ಲಿರುವುದಿಲ್ಲ.

ಸಂಖ್ಯೆ:ಆರ್‌ಡಿ/46/ಟಿಆರ್‌ಎಂ/2020

(ಆರ್. ಅಶೋಕ)
ಕಂದಾಯ ಸಚಿವರು
ಕರ್ನಾಟಕ ಸರ್ಕಾರ

ಅನುಬಂಧ-1

ಅನುಬಂಧ - 1

[illegible] (RTC) [illegible]

Print Page No: 1/1
Valid from 31/12/2020 [illegible] Fail To [illegible]

1 [illegible]	3 [illegible]	[illegible]	4 [illegible]	[illegible]	9 [illegible]	[illegible]	[illegible]	10 [illegible]	11 [illegible]	
[illegible]	[illegible]	137.13.00.00	[illegible]	13.10	[illegible]	107.03.00.00	0	ARI 1/2010-2011 17/02/2010 [illegible]	[illegible]	[illegible]
	[illegible]	22.32.00.00	[illegible]	0.00						
	[illegible]	0.00.00.00	[illegible]	0.00						
	[illegible]	115.31.00.00	[illegible]	0.00						
			[illegible]	13.10	[illegible]	0.15.00.00	41	[illegible]/2002-03 20/03/2002 [illegible]	[illegible]	
					[illegible]	0.15.00.00	407	[illegible]/2002-03 20/03/2002 [illegible]	[illegible]	
					[illegible]	0.30.00.00	394	[illegible]/2002-03 20/03/2002 [illegible]	[illegible]	[illegible] 57/2001 2005 [illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
2019-2020 [illegible]	[illegible]	[illegible] 107.03.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 0.15.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 0.15.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 0.30.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 1.00.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 0.30.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 0.35.00.00			No Crop Info.	0.00.00.00	0.00.00.00	0.00.00.00		0.00
	[illegible]	[illegible] 0.20.00.00			No Crop Info.	0.00.00.00	0.00.00.00	0.00.00.00		0.00

